# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:331 • ನೋಂದಣಿ ನಂ.:KARKAN27911 • ವಿಜಯನಗರ • 04.06.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:331 • Reg.No:KARKAN27911 • VIJAYANAGARA • 04.06.2024 • Tuesday • Page:04 • Rs:2



S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201



ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201


# ಈಶಾನ್ಯ ಪದವೀಧರರಿಂದ ವಿಜಯನಗರ ಜಿಲ್ಲೆಯಲ್ಲಿ ಶೇ.73.76 ರಷ್ಟು ಮತದಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ 21 ಮತಗಟ್ಟೆಗಳಲ್ಲಿ ಸೋಮವಾರ ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆಯು ಬೆಳಗ್ಗೆ 8 ರಿಂದ ಸಂಜೆ 4 ಗಂಟೆವರೆಗೆ ಶಾಂತಯುತವಾಗಿ ನಡೆದಿದ್ದು, ಶೇ.73.76ರಷ್ಟು ಮತದಾನ ದಾಖಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.





ವಿಜಯನಗರ ಜಿಲ್ಲೆಯಲ್ಲಿ ಪರುಷರು ಹಾಗೂ ಮಹಿಳೆಯರು ಮತ್ತು ಇನ್ನಿತರರು ಸೇರಿ ಒಟ್ಟು 18,233 ಪದವೀಧರ ಮತದಾರರು ಇದ್ದು, ಒಟ್ಟು 11,895 ಪುರುಷ ಮತದಾರರ ಪೈಕಿ 9012 ಮತದಾರರು ಹಾಗೂ ಒಟ್ಟು 6336 ಮಹಿಳಾ ಮತದಾರರ ಪೈಕಿ 4436 ಮಹಿಳಾ ಮತದಾರರು ಮತ್ತು ಇತರೆ ಇಬ್ಬರು ಮತದಾರರ ಪೈಕಿ ಒಬ್ಬರು ಸೇರಿ ಒಟ್ಟು 13,449 ಮತದಾರರು ಮತದಾನ ಮಾಡಿದ್ದಾರೆ.

**ಹೂವಿನಹಡಗಲಿ:** ತಾಲೂಕಿನ ಒಟ್ಟು 4 ಮತಗಟ್ಟೆ ಕೇಂದ್ರಗಳಲ್ಲಿ ಮತದಾನ ನಡೆಯಿತು. ಜಿ.ಪಿ.ಜಿ. ಸರ್ಕಾರಿ ಪದವಿ ಪೂರ್ವ ಕಾಲೇಜು ರೂಂ.ನಂ.01 ಹೂವಿನಹಡಗಲಿ., ಜಿ.ಪಿ.ಜಿ. ಸರ್ಕಾರಿ ಪದವಿ ಪೂರ್ವ ಕಾಲೇಜ ರೂಂ.ನಂ.02 ಹೂವಿನಹಡಗಲಿ., ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಇಟ್ಟಿಗಿ., ವೀರಪ್ಪ ಕೊಗಪ್ಪ ಕೊಂಪಿ ಸರ್ಕಾರಿ ಪದವಿ ಪೂರ್ವ ಕಾಲೇಜ್, ಹಿರೇಹಡಗಲಿನಲ್ಲಿ ಮತದಾನ ನಡೆಯಿತು.

**ಹಗರಿಬೊಮ್ಮನಹಳ್ಳಿ:** ತಾಲೂಕಿನ 04 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮನಗರ, ಹಗರಿಬೊಮ್ಮನಹಳ್ಳಿ (ಕೊಠಡಿ–01)., ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮನಗರ, ಹಗರಿಬೊಮ್ಮನಹಳ್ಳಿ (ಕೊಠಡಿ–02)., ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಂಪಸಾಗರ ಮತ್ತು ಗ್ರಾಮ ಪಂಚಾಯತಿ ಕರ್ಚೇರಿ ತಂಬ್ರಹಳ್ಳಿನಲ್ಲಿ ಮತದಾನ ನಡೆಯಿತು.

**ಕೊಟ್ಟೂರು:** ತಾಲೂಕಿನ 3 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. ಗ್ರಾಮ ಪಂಚಾಯತಿ ಕಚೇರಿ, ಕೋಗಳಿ, ಸರಕಾರಿ ಪದವಿ ಪೂರ್ವ (ಬಾಲಕರ) ಕಾಲೇಜು, ಪೂರ್ವ ಭಾಗ, ಉಜ್ಜಿನಿ ರಸ್ತೆ, ಕೊಟ್ಟೂರು ಮತ್ತು ಸರಕಾರಿ ಪದವಿ ಪೂರ್ವ (ಬಾಲಕರ) ಕಾಲೇಜು., ಪೂರ್ವ ಭಾಗ, ಉಜ್ಜಿನಿ ರಸ್ತೆ, ಕೊಟ್ಟೂರು ಮತಗಟ್ಟೆಗಳಲ್ಲಿ ಮತದಾನ ನಡೆಯಿತು.

**ಹೊಸಪೇಟೆ:** ತಾಲೂಕಿನ 4 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಪಿ.ಬಿ.ಎಸ್.) ಚಿತ್ತವಾಡಿಗಿ, ಹೊಸಪೇಟೆ., (ಕೊಠಡಿ ನಂ 01)., ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಪಿ.ಬಿ.ಎಸ್.) ಚಿತ್ತವಾಡಿಗಿ, ಹೊಸಪೇಟೆ. (ರೂಮ್ ನಂಬರ್ 2)., ಸರ್ಕಾರಿ ಬಾಲಕೀಯರ ಪ್ರೌಢಶಾಲೆ, ಬಸ್‌ಸ್ಟ್ಯಾಂಡ್ ಹತ್ತಿರ, ಕಮಲಾಪುರ ಮತ್ತು ಸರ್ಕಾರಿ ಪ್ರೌಡಶಾಲೆ, ಮರಿಯಮ್ಮನಹಳ್ಳಿನಲ್ಲಿ ಮತದಾನ ನಡೆಯಿತು.

ಕೂಡ್ಲಿಗಿ: ತಾಲೂಕಿನ 3 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. ತಾಲೂಕು ಪಂಚಾಯಿತಿ ಕೂಡ್ಲಿಗಿ., ಗ್ರಾಮ ಪಂಚಾಯತಿ ಕಾರ್ಯಾಲಯ, ಗುಡೆಕೋಟೆ ಮತ್ತು ಉನ್ನತಿಕರಣ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹೊಸಹಳ್ಳಿನಲ್ಲಿ ಮತದಾನ ನಡೆಯಿತು.

**ಹರಪನಹಳ್ಳಿ:** ತಾಲೂಕಿನ 3 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. ಸರ್ಕಾರಿ ಜೂನಿಯರ್ ಕಾಲೇಜ್ ಹರಪನಹಳ್ಳಿ., ಸರ್ಕಾರಿ ಜೂನಿಯರ್ ಕಾಲೇಜು ಹರಪನಹಳ್ಳಿ ಮತ್ತು ಸರ್ಕಾರಿ ಜೂನಿಯರ್ ಕಾಲೇಜು, ಹರಪನಹಳ್ಳಿ (ಜೆ.ಒ.ಸಿ. ಹಾಲ್)ನಲ್ಲಿ ಮತದಾನ ನಡೆಯಿತು.

**ಮತದಾನದ ಚಿತ್ರಣ:** ಹೊಸಪೇಟೆ ನಗರದಲ್ಲಿ ಬೆಳಗಿನ 10 ಗಂಟೆವರೆಗೆ ಮತಗಟ್ಟೆ ಸಂಖ್ಯೆ 154ಎ ನಲ್ಲಿ ಒಟ್ಟು 1470 ಮತದಾರರ ಪೈಕಿ 71 ಪುರುಷರು ಹಾಗೂ 53 ಮಹಿಳಾ ಮತದಾರರು ಮಾತ್ರ ಮತಹಕ್ಕನ್ನು ಚಲಾಯಿಸಿದ್ದರು. ಹತ್ತಿರದಲ್ಲಿನ ಮತಗಟ್ಟೆ ಸಂಖ್ಯೆ 154ರಲ್ಲಿ 827 ಪುರುಷರ ಪೈಕಿ 94 ಜನರು ಮತ್ತು 647 ಮಹಿಳೆಯರ ಪೈಕಿ 46 ಜನರು ತಮ್ಮ ಮತಹಕ್ಕನ್ನು ಚಲಾಯಿಸಿದ್ದರು. ಅದೇ ರೀತಿ ಮರಿಯಮ್ಮನಹಳ್ಳಿಯಲ್ಲಿನ ಮತಗಟ್ಟೆ ಸಂಖ್ಯೆ 156ರಲ್ಲಿ ಬೆಳಗಿನ 11.10ರವರೆಗೆ ಒಟ್ಟು 258 ಪುರುಷರ ಪೈಕಿ 65 ಜನರು ಹಾಗೂ 138 ಮಹಿಳೆಯರ ಪೈಕಿ 26 ಜನರು ತಮ್ಮ ಮತಹಕ್ಕನ್ನು ಚಲಾಯಿಸಿದ್ದು ಕಂಡು ಬಂದಿತು.

## ಮತಗಟ್ಟೆಗಳಿಗೆ ಚುನಾವಣಾ ವೀಕ್ಷಕರು, ಜಿಲ್ಲಾಧಿಕಾರಿ ಭೇಟಿ

**ಹಂಪಿ ಟೈಮ್ಸ್ ಹೊಸಪೇಟೆ:** ನಗರದಲ್ಲಿನ ಚಿತ್ತವಾಡಗಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮತಗಟ್ಟೆಗೆ ಕರ್ನಾಟಕ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆಯ ವೀಕ್ಷಕರಾದ ಮಹೇಶ್ವರರಾವ್ ಅವರೊಂದಿಗೆ ಡಿಸಿ ದಿವಾಕರ ಅವರು ಮತಗಟ್ಟೆಗೆ ತೆರಳಿ ಮತಗಟ್ಟೆಗಳಲ್ಲಿನ ವ್ಯವಸ್ಥೆಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಮೊಹಮದ್ ಅಲಿ ಅಕ್ರಂ ಷಾಹ, ತಹಸೀಲ್ದಾರ ಶ್ರುತಿ ಎಂ.ಎಂ. ಸೇರಿದಂತೆ ಇತರರು ಇದ್ದರು. ಇದೆ ವೇಳೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಚಿತ್ತವಾಡಗಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮತಗಟ್ಟೆಯಲ್ಲಿ ಮತದಾನ ಮಾಡಿದರು.

# ಇಂದು ಲೋಕಸಭಾ ಮತ ಎಣಿಕೆ ಜಿಲ್ಲಾದ್ಯಂತ 144 ಸೆಕ್ಷನ್ ಜಾರಿ: ಡಿಸಿ

## ವಿಜಯದ ಸಂಭ್ರಮಾಚರಣೆಗೆ ನಿಷೇಧ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಮತ ಎಣಿಕೆ ಸಂಬಂಧ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಜೂ.4ರಂದು ಬೆಳಿಗ್ಗೆ 6 ರಿಂದ ಜೂ.5ರ ಬೆಳಿಗ್ಗೆ 06 ಗಂಟೆಯವರೆಗೆ ವಿಜಯನಗರ ಜಿಲ್ಲೆಯಾದ್ಯಂತ 144 ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶ ಹೊರಡಿಸಿದ್ದಾರೆ.

ಮತ ಎಣಿಕೆ ಕಾರ್ಯವು ಮುಕ್ತಾಯಗೊಂಡ ನಂತರ ಗೆದ್ದ ಪಕ್ಷಗಳು ವಿಜಯೋತ್ಸವವನ್ನು ಅದ್ದೂರಿಯಾಗಿ ನಡೆಸಿ ಶಾಂತತೆಗೆ ಭಂಗ ಉಂಟು ಮಾಡುವುದು, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವುದು ಹಾಗೂ ಇತರೆ ಅಹಿತಕರ ಘಟನೆಗಳು ನಡೆಯುವ ಸಂಭವವಿದ್ದು, ಈ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ವಿಜಯನಗರ ಜಿಲ್ಲಾದ್ಯಂತ ವಿಜಯದ ಸಂಭ್ರಮಾಚರಣೆ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ದಂಡ ಸಂಹಿತೆಯ 188ರ ಪ್ರಕಾರ ಕ್ರಮವನ್ನು ಜರುಗಿಸಲಾಗುವುದು. ಈ ಆದೇಶವು ಮತ ಎಣಿಕೆ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ಹಾಗೂ ಚುನಾವಣಾ ಕಾರ್ಯನಿರತ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಅನ್ವಯಿಸುವುದಿಲ್ಲ.

ವಿಜಯನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 05 ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಪಟಾಕಿ ಸಿಡಿಸುವುದು, ಜಿಲ್ಲಾದ್ಯಂತ ವಿಜಯೋತ್ಸವವನ್ನು ಸಂಭ್ರಮಿಸುವುದು, ಮೆರವಣಿಗೆ, ರಾಜಕೀಯ ಸಭೆ ಸಮಾರಂಭ, ವಾಹನ ಜಾಥಾ ರ್‍ಯಾಲಿ ಮುಂತಾದ ಯಾವುದೇ ಚಟುವಟಿಕೆ ನಡೆಸುವುದು ಸಂಪೂರ್ಣವಾಗಿ ನಿಷೇಧಿಸಿದೆ. ಶಸ್ತ್ರ ಬಡಿಗೆ, ಬರ್ಚಿ, ಖಡ್ಗ, ಗದೆ, ಬಂದೂಕು, ಚೂರಿ, ಲಾಠಿ, ಡೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನು ಉಂಟು ಮಾಡಬಹುದಾದ ಯಾವುದೇ ಮಾರಕಾಸ್ತ್ರವನ್ನು ತೆಗೆದುಕೊಂಡು ಹೋಗುವುದನ್ನು ಮತ್ತು ಅವುಗಳೊಂದಿಗೆ ತಿರುಗಾಡುವುದನ್ನು ಪ್ರತಿಬಂಧಿಸಲಾಗಿದ್ದು, ಕಂಡುಬಂದರೆ ಅಂಥಹ ಮಾರಕಾಸ್ತ್ರಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಂಡು ವ್ಯಕ್ತಿಗಳ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.,

ಮನುಷ್ಯ ರೂಪದ ಅಥವಾ ಅವುಗಳ ಆಕೃತಿ ಅಥವಾ ಪ್ರತಿಮೆಗಳ ಪ್ರದರ್ಶನ/ದಹನ ಮಾಡುವುದನ್ನು, ಬಂದ್ ಪ್ರತಿಭಟನೆ, ಮುಷ್ಕರ, ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ಹಾನಿಗೊಳಿಸುವ ಎಲ್ಲಾ ರೀತಿಯ ಚಟುವಟಿಕೆಗಳು ನಿಷೇಧಿಸಿದೆ., ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು, ಕೂಗಾಟ ಮಾಡುವುದನ್ನು ಹಾಗೂ ವ್ಯಕ್ತಿಗಳ ತೇಜೋವಧೆ ಮಾಡುವಂತಹ ಚಿತ್ರಗಳು, ಚಿಹ್ನೆಗಳು, ಪ್ರತಿಕೃತಿಗಳು ಮುಂತಾದವುಗಳನ್ನು ಪ್ರದರ್ಶಿಸುದಾಗಲಿ, ಸುವ್ಯವಸ್ಥೆಗೆ ಭಂಗ ತರುವಂತಹ ಯಾವುದೇ ಕೃತ್ಯಗಳಲ್ಲಿ ತೊಡಗುವುದನ್ನು ನಿಷೇಧಿಸಲಾಗಿದೆ., ಮದುವೆ ಮತ್ತು ಇತರೆ ಧಾರ್ಮಿಕ ಮೆರವಣಿಗೆಗಳು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರದಂತೆ ಪಾಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

**ಮೈಕ್ರೋ ನ್ಯೂಸ್**

## ಜೂ.೯ ಪಂಚಮಸಾಲಿ ಸಮುದಾಯದಿಂದ ಪ್ರತಿಭಾ ಪುರಸ್ಕಾರ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ವೀರಶೈವ ಲಿಂಗಾಯತ ಪಂಚಮಸಾಲಿ ತಾಲೂಕು ಘಟಕದಿಂದ 2023–24ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಬಸವರಾಜ್ ಸೊನ್ನದ್ ತಿಳಿಸಿದರು.



ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತಲ್ಲೂ ಹೆಚ್ಚು ಅಂಕಗಳನ್ನು ಪಡೆದ, ಸಮುದಾಯದ ತಾಲೂಕಿನ ವಿದ್ಯಾರ್ಥಿಗಳಿಗಾಗಿ ಈ ಕಾರ್ಯಕ್ರಮವನ್ನು ಜೂ.9ರ ಭಾನುವಾರ ಹರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದ್ದು, ಇದರೊಂದಿಗೆ ಸಮುದಾಯದ ನಿವೃತ್ತ ನೌಕರರಿಗೂ ಸನ್ಮಾನ ಸಮಾರಂಭ ಜರುಗಲಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಇದೇ ಜೂ.05ರೊಳಗೆ ಸಮುದಾಯದ ಭವನದಲ್ಲಿ ಕಚೇರಿಯ ವೇಳೆಯೊಳಗೆ ಅರ್ಜಿಗಳನ್ನು ಸಲ್ಲಿಸಬೇಕು, ಕಡ್ಡಾಯವಾಗಿ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ಪ್ರಮಾಣಪತ್ರ ಹಾಗೂ ಪಾಸ್ ಫೋಟೋದೊಂದಿಗೆ ಸ್ವ ವಿವರವುಳ್ಳ ಅರ್ಜಿಗಳನ್ನು ಸಲ್ಲಿಸಬೇಕು. ನಿವೃತ್ತ ನೌಕರರು ತಮ್ಮ ವಾಸಸ್ಥಳ ದೃಢೀಕರಣ ಪತ್ರದೊಂದಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

# ವಿಜಯನಗರ ರಾಯರ ಕೆರೆ ಮಳೆಗೆ ಬೆಳೆಗಳು ಜಲಾವೃತ



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನಲ್ಲಿ ಭಾನುವಾರ ರಾತ್ರಿ 58.17 ಎಂ.ಎಂ. ಮಳೆಯಾಗಿದ್ದು, ಒಂದು ಗಂಟೆಗೂ ಅಧಿಕ ಸುರಿದ ಮಳೆಯಿಂದಾಗಿ ನಗರದ ಹೊರವಲಯದ ರಾಯರ ಕೆರೆಯಲ್ಲಿ ಬೆಳೆದ ಬೆಳೆಗಳು ಜಲಾವೃತಗೊಂಡಿದ್ದು, ರೈತರು ಆತಂಕಕ್ಕೆ ಸಿಲುಕಿದ್ದಾರೆ. ವಿನಾಯಕ ನಗರ ಬಡಾವಣೆಯ ಉದ್ಯಾನವನ ಸೇರಿದಂತೆ ನಗರದ ಅನೇಕ ತಗ್ಗು ಪ್ರದೇಶಕ್ಕೆ ನೀರು ನುಗ್ಗಿದ್ದು, ಜನಸಂಚಾರ ಮತ್ತು ವಾಯುವಿಹಾರಕ್ಕೂ ತೆರಳದಂತಾಗಿದೆ. ಈ ಭಾಗದ ನಿವಾಸಿಗಳು, ಮಕ್ಕಳು, ವಯೋವೃದ್ಧರು ಸೇರಿದಂತೆ ವಿಶೇಷ ಚೇತನರು ಒಳಹೋಗದಂತೆ ನೀರು ತುಂಬಿದೆ. ಉದ್ಯಾನವನವನ್ನು ಸುಸ್ಥಿತಿಗೆ ತರುವಂತೆ ವಿನಾಯಕನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರುಗಳು ಈ ಹಿಂದಿನಿಂದಲೂ ನಗರಸಭೆ ಪೌರಾಯುಕ್ತರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ, ಇನ್ನಾದರೂ ಸ್ಪಂದಿಸಲಿ ಎಂದು ಎಂದು ಎಸ್.ಎಂ.ಭಾಷ ಒತ್ತಾಯಿಸಿದರು.




ಹೊಸಪೇಟೆ ವಿನಾಯಕನಗರ ಬಡಾವಣೆಯ ಉದ್ಯಾನವನಕ್ಕೆ ಮಳೆ ನೀರು ನುಗ್ಗಿರುವುದು









## ಬೆಳಕಿನ ಹಾದಿ

# ಎನ್ನ ಹೃದಯದಲ್ಲಿ ನಿಮ್ಮ ಚರಣ ....

■ **ಗುರು ಹಿರೇಮಠ, ಹಗರಿಬೊಮ್ಮನಹಳ್ಳಿ**



ಜಗಜ್ಯೋತಿ ಶ್ರೀ ಬಸವೇಶ್ವರರ ಈ ವಚನ ಎನಗೆ ನಿಮ್ಮ ನೆನಹಾದಾಗಲೆ ಉದಯ: ಎನಗೆ ನಿಮ್ಮ ಮರಹಾದಾಗಲೆ ಅಸ್ತಮಾನ! ಎನಗೆ ನಿಮ್ಮ ನೆನೆಹವೆ ಜೀವನ: ಎನಗೆ ನಿಮ್ಮ ನೆನಹವೆ ಪ್ರಾಣ, ಕಾಣಾ, ತಂದೇ, ಸ್ವಾಮಿ! ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯ ನೊತ್ತಯ್ಯಾ: ವದನದಲ್ಲಿ ಷಡಕ್ಷರಿಯ ಬರೆಯಯ್ಯಾ, ಕೂಡಲಸಂಗಮದೇವಾ.

ನಮ್ಮನ್ನು ಅಂಧಕಾರದಿಂದ ಬೆಳಕಿನೆಡೆಗೆ ಮುನ್ನಡೆಸುವಂಥದ್ದು. ಬೆಳಗಿನ ಸೂರ್ಯೋದಯದಿಂದ ಹಿಡಿದು ರಾತ್ರಿ ಮಲಗುವವರೆಗೂ ನಾವು ನಮ್ಮದೇ ಆದ ಆಸೆ – ಆಮಿಷಗಳಿಂದ ಕೂಡಿದ ಕೆಲಸ ಮತ್ತು ವ್ಯವಹಾರದಲ್ಲಿ ಮಗ್ನರಾಗಿರುತ್ತೇವೆ. ನಿತ್ಯದ ಎಲ್ಲ ಬಗೆಯ ತೃಷೆಗಳು, ಲೋಭಗಳು ಬೆಳಗಿನಿಂದ ಬೈಗಿನವರೆಗೆ ನಿರಂತರವಾಗಿ ನಮ್ಮನ್ನು ಗಾಢವಾಗಿಯೇ ಇಡೀ ದಿನದ ಹಗಲಿನ ಬೆಳಕಿನಲ್ಲಿ ಮಲಗಿಸಿಬಿಟ್ಟಿರುತ್ತವೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಸತ್ಯವೇ ತನ್ನ ಸರ್ವಸ್ವ ಎಂದು ಬದುಕಿದ ಶ್ರೀ ಬಸವೇಶ್ವರರು ನಮಗಿಲ್ಲಿ ಬಾನಂಗಳದ ಚಂದ್ರನಂತೆ ಬೆಳಕಿನ ಒಂದು ಮಹಾನ್ ಮಗುವಾಗಿ ಕಂಗೊಳಿಸುತ್ತಾರೆ.

ಬಸವಣ್ಣನವರಿಗೆ ಇಲ್ಲಿ ಶಿವನನ್ನು ಸ್ಮರಿಸುವುದೇ ಉದಯ ,ಅದೇ ಅವರ ಜೀವಂತಿಕೆ. ಈ ರೀತಿಯ ನಿತ್ಯದ ಸ್ಮರಣೆಯಿಂದ ಒಬ್ಬ ವ್ಯಕ್ತಿಯ ಅಹಂ ನಾಶವಾಗಿ ಅವನು ಪ್ರಜ್ಞಾ ಸ್ಥಿತಿಗೆ ತಲುಪುತ್ತಾನೆ. ಹಾಗಾಗಿ ಅವರಿಗೆ ಈ ಶಿವಭಾವ ಸ್ಥಿತಿ ಅಥವಾ ಪ್ರಜ್ಞೆಯೇ ಉದಯ. ಯಾವಾಗ ಈ ಪ್ರಜ್ಞೆಯು ಇಲ್ಲದ ಸ್ಥಿತಿಯಲ್ಲಿ ಇರುತ್ತಾರೋ ಅದು ಅಸ್ತಮಾನ. ಅಂದರೆ ಪ್ರಜ್ಞಾಹೀನತೆ ಒಂದು ರೀತಿಯಲ್ಲಿ ಸಾವಿನಂತೆ ನಿಷ್ಪ್ರಯೋಜಕ.ಈ ಕಾರಣಕ್ಕಾಗಿ ಅವರು ಎನಗೆ ನಿಮ್ಮ ನೆನಹವೇ ಜೀವನ, ನಿಮ್ಮ ನೆನಹವೇ ಪ್ರಾಣ ಎಂದು ಹೇಳಿದ್ದಾರೆ.

ನಮ್ಮ ಸಾಮಾಜಿಕ ವ್ಯವಸ್ಥೆಯು ಸಹ ನಮ್ಮ ಪ್ರಜ್ಞೆಯನ್ನು ತಪ್ಪಿಸುವಂತಹ ಬಹಳಷ್ಟು ಹವ್ಯಾಸಗಳಾದ ಕುಡಿತ, ತುಂಬಾಕು ಸೇವನೆ, ಜೂಜು, ಅತಿಯಾದ ಲೈಂಗಿಕತೆ, ಮಾದಕ ವಸ್ತುಗಳ ವ್ಯಸನ ಇನ್ನು ಮುಂತಾದ ಚಟುವಟಿಕೆಗಳಿಗೆ ಅತ್ಯಂತ ಕೆಳಮಟ್ಟದ ಸ್ಥಾನ ನೀಡಿರುವುದು ಗಮನಾರ್ಹ. ವಿಶ್ವವಿಖ್ಯಾತ ದಾರ್ಶನಿಕ ಶ್ರೀ ರಜನೀಶ್ ಓಶೋ ರವರು' ಪ್ರಜ್ಞೆಗಾಗಿ ನೀವು ಎಲ್ಲವನ್ನು ತ್ಯಾಗ ಮಾಡಿ, ಆದರೆ ಪ್ರಜ್ಞೆಯನ್ನು ಯಾವುದಕ್ಕೂ ತ್ಯಾಗ ಮಾಡಬೇಡಿ' ಎಂದು ಹೇಳಿರುವುದು ಪ್ರಜ್ಞೆಯ ಉತ್ಕೃಷ್ಟತೆಯನ್ನು ಎತ್ತಿ ಹಿಡಿಯುತ್ತದೆ. ಏಕೆಂದರೆ ಈ ಪ್ರಜ್ಞೆಯೇ ನಮ್ಮ ಮೂಲ ಸ್ಥಿತಿ, ಅದು ಮಾನವನನ್ನು ದೇವಮಾನವನನ್ನಾಗಿಸು ವಂಥದ್ದು.

ಹೀಗೆ ಬಸವಣ್ಣನವರು ಪ್ರಜ್ಞೆ ಅಥವಾ ಈ ಗಾಢವಾದ ಶಿವಭಾವ ಸ್ಥಿತಿ ತಮ್ಮಲ್ಲಿ ಮತ್ತಷ್ಟು ಗಡುತರವಾಗಿ ನೆಲೆಗೊಳ್ಳುವಂತಾಗಲು ತಮ್ಮ ಹೃದಯದಲ್ಲಿ ಶಿವ ಪಾದಾಂಕಿತ ಮುದ್ರೆಯೊತ್ತಿ ನಾಲಿಗೆ ಅಥವಾ ಮುಖದ ಮೇಲೆ ಓಂ ನಮಃ ಶಿವಾಯ ಎಂಬ ಷಡಕ್ಷರಿಯ ಮಂತ್ರ ಬರೆಯಬೇಕೆಂದು ತಮ್ಮ ಆರಾಧ್ಯ ದೈವ ಕೂಡಲಸಂಗಮನಲ್ಲಿ ಪ್ರಾರ್ಥಿಸುತ್ತಾರೆ. ಬಸವಣ್ಣನವರ ಈ ಪ್ರಾರ್ಥನೆಯ ಹಿಂದಿನ ಭಕ್ತಿ –ಭಾವ ನಮ್ಮ ತಾರ್ಕಿಕ ಮನಸ್ಸಿಗೆ ಮತ್ತು ಬೌದ್ಧಿಕತೆಗೆ ನಿಲುಕಲಾರದ್ದು. ಅದು ಯಾವಾಗಲೂ ಹೀಗೆಯೇ, ಅದಕ್ಕೆ ಅದು ಪ್ರಾರ್ಥನೆ. ನಮ್ಮಲ್ಲಿ ಬಹುದೊಡ್ಡ ಪರಿವರ್ತನೆ ಮಾಡಿ ಬದುಕಿನಲ್ಲಿ, ಜಗತ್ತಿನಲ್ಲಿ ಅದ್ಭುತವನ್ನು ಸೃಷ್ಟಿಸುವಂಥದ್ದು, ಅದೇ ಪ್ರಾರ್ಥನೆಯ ಶಕ್ತಿ.

**ಮಕ್ಕಳು ಅರಸರಾಗಬೇಕೆ?**

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ
ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
– ಜಾಹೀರಾತು ವ್ಯವಸ್ಥಾಪಕರು.

# ಉದಯೋನ್ಮುಖ ಕಬಡ್ಡಿ ಆಟಗಾರ ಗಗನ್ ಗೌಡ

## ಯುಪಿ ಯೋಧ ಪ್ರೊ ಕಬಡ್ಡಿ ತಂಡದವತಿಯಿಂದ ಆಯ್ಕೆಯಾಗಿ ಸೀಸನ್ 10ರಲ್ಲಿ ಮಿಂಚಿದ ಗೌಡ

ಎಂಟೆದೆ ಬಂಟರ ಆಟ ಕಬ್ಬಡ್ಡಿ,ಕಬ್ಬಡ್ಡಿ ಆಡಬೇಕೆಂದರೆ ಗುಂಡಿಗೆ ಗಟ್ಟಿಯಾಗಿರಬೇಕು,ಪ್ರೊ ಕಬ್ಬಡಿಯ ಸೀಸನ್ ಶುರುವಾದರೆ ಕಬ್ಬಡಿ ಪ್ರಿಯರಲ್ಲಿ ಎಲ್ಲಿಲ್ಲದ ಸಂತೋಷ ಪ್ರೇಕ್ಷಕರಲ್ಲಿಯೇ ಪೈಪೋಟಿ.

ಇತ್ತೀಚಿನ ಕಬ್ಬಡಿ ಸೀಸನ್ 10 ರಲ್ಲಿ ಯುಪಿ ಯೋಧ ತಂಡವನ್ನು ಪ್ರತಿನಿಧಿಸಿದ ಶಿವಮೊಗ್ಗ ಜಿಲ್ಲೆಯ ರಿಪ್ಪನ್ ಪೇಟೆಯ ಹಾಲುಗುಡ್ಡೆಯ ಉದಯೋನ್ಮುಖ ಆಟಗಾರ ಗಗನ್ ಗೌಡ ತನ್ನದೇ ಆದ ಅಭಿಮಾನಿ ಬಳಗವನ್ನು ಹೊಂದಿದ್ದಾರೆ.

ಇವರು ರಾಜು ಹೆಚ್,ಎಸ್.ಪೂರ್ಣಿಮಾ ದಂಪತಿಗಳ ಮಗನಾಗಿ 22 ಮೇ 2003 ರಂದು ಜನಿಸಿರುತ್ತಾರೆ. ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ರಿಪ್ಪನ್ ಪೇಟೆಯ ರಾಮಕೃಷ್ಣ ವಿದ್ಯಾಲಯದಲ್ಲಿ ಹಾಗೂ ಪದವಿಪೂರ್ವ ಶಿಕ್ಷಣವನ್ನು ಎಸ್, ಡಿ ,ಎಮ್ . ಕಾಲೇಜಿನಲ್ಲಿ ಪೂರೈಸಿ ಬಿ,ಎ. ಪದವಿ ಶಿಕ್ಷಣವನ್ನು ಎಸ್,ಡಿ,ಎಮ್ ಉಜಿರೆಯಲ್ಲಿ ಪಡೆಯುತ್ತಿದ್ದಾರೆ.

ಪ್ರಾಥಮಿಕ ಶಿಕ್ಷಣವನ್ನು ಪಡೆಯುವಾಗ ವಾಲಿಬಾಲ್ ಮತ್ತು ಕಬಡ್ಡಿ ಕ್ರೀಡೆಯಲ್ಲಿ ಆಸಕ್ತಿಯನ್ನು ಹೊಂದಿದ್ದರು ಇವರಿಗೆ ದೈಹಿಕ ಶಿಕ್ಷಕರಾದ ವಿನಯ್ ರವರು ಮಾರ್ಗದರ್ಶನ ಮಾಡಿರುತ್ತಾರೆ. ಪದವಿಪೂರ್ವ ಶಿಕ್ಷಣದ ಸಂದರ್ಭದಲ್ಲಿ ಕೃಷ್ಣಾನಂದ ರಾವ್ ದೈಹಿಕ ಶಿಕ್ಷಣ ನಿರ್ದೇಶಕರು ಕಬ್ಬಡ್ಡಿಯ ಪಟ್ಟುಗಳನ್ನು ಗಟ್ಟಿಮಾಡಿರುತ್ತಾರೆ.

ಕ್ರೀಡಾ ಕಾರ್ಯದರ್ಶಿ ರಮೇಶ್ ಹಾಗೂ ದೈಹಿಕ ಸಾಮರ್ಥ್ಯ ತರಬೇತುದಾರರಾದ ಸುದ್ದಿನ್ ರವರ ಮಾರ್ಗದರ್ಶನ ಅನನ್ಯ. ದೈಹಿಕ ಶಿಕ್ಷಣ ಶಿಕ್ಷಕರಾದ ವಿನಯ್ ರವರು ಅದೇ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದು ಮುಂದೆ ಕಬ್ಬಡ್ಡಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ತಿಳಿಸುತ್ತಾರೆ ಇದರ ಫಲವಾಗಿ ಉಚಿತ ವಿದ್ಯಾಭ್ಯಾಸ,ಹಾಸ್ಟೆಲ್ ವ್ಯವಸ್ಥೆ ಲಭ್ಯವಾಗಿ ಉತ್ತಮ ತರಬೇತು ಪಡೆದು ಪ್ರದರ್ಶನ ನೀಡಲು ಆರಂಭಿಸುತ್ತಾರೆ ಆದರೆ ದುರಾದೃಷ್ಟವಶಾತ್ ಆಗ ಕೋವಿಡ್ ಕಾಡಲಾರಂಭಿಸಿ ರಾಷ್ಟ್ರೀಯ ಪಂದ್ಯಗಳು ನಡೆಯದೆ ಉಳಿದಿದ್ದು ಕಹಿ ನೆನಪು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಪೋಷಕರು ವಿದ್ಯಾಭ್ಯಾಸದ ಜೊತೆಗೆ ಕಬ್ಬಡಿ ಕ್ರೀಡೆಯಲ್ಲಿ ಇವರನ್ನು



ತೊಡಗಲು ಯಾವುದೇ ಷರತ್ತನ್ನು ವಿಧಿಸಿರಲಿಲ್ಲ, ಸ್ಥಳೀಯ ವಾಗಿ ನಡೆಯುವ ಯಾವುದೇ ಪಂದ್ಯಾವಳಿಗಳಿದ್ದರೂ ತಂದೆ–ತಾಯಿ ಜೊತೆಗೂಡಿ ಪಂದ್ಯವನ್ನು ವೀಕ್ಷಿಸುತ್ತಿದ್ದರು.

ಸ್ಥಳೀಯರು ಹಾಗೂ ಹಿರಿಯ ಆಟಗಾರರ ಸಹಕಾರದಿಂದ ನಾನು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು ಎಂದು ಹೇಳುತ್ತಾರೆ ಗಗನ್.

ಈ ಹಿಂದೆಯೇ ಇವರ ಕಾಲೇಜಿನ ರತನ್, ಪ್ರತಾಪ್, ಮಿಥುನ್ ಈಗಾಗಲೇ ಪ್ರೊ ಕಬಡ್ಡಿಯಲ್ಲಿ ಆಡಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರು ಇವರ ಮಾರ್ಗದರ್ಶನವೂ ಸಹ ಇವರು ಹೆಚ್ಚಿನ ಕೌಶಲ್ಯ ಹೊಂದಲು ಸಹಕಾರಿಯಾಯಿತು. ಮುಂಬರುವ ಕಬ್ಬಡ್ಡಿ ಆಟಗಾರರು ಉತ್ತಮ ತರಬೇತಿ ನೀಡುವ ಕ್ಲಬ್ ಗಳನ್ನು ಆಯ್ಕೆ ಮಾಡಿಕೊಂಡು ತರಬೇತಿಯನ್ನು ಪಡೆಯಿರಿ. ಲೋಕಲ್ ಪಂದ್ಯಾವಳಿಗಳನ್ನು ಆದಷ್ಟು ಕಡಿಮೆ ಆಡಿ ಕಾರಣ ಇಂಜುರಿಯಾಗುವ ಸಾಧ್ಯತೆ ಇರುತ್ತದೆ. ನುರಿತ ಆಟಗಾರರೊಂದಿಗೆ ಆಡುವಾಗ ಕೇವಲ ಕೌಶಲ್ಯಗಳು ಪ್ರದರ್ಶನಗೊಳ್ಳುತ್ತವೆ ಹೊರತು ಜಿದ್ದಿನ ಪೈಪೋಟಿ ನಡೆಯುವುದಿಲ್ಲ ಉತ್ತಮ ಪಂದ್ಯಗಳಲ್ಲಿ ಮಾತ್ರ ನೀವು ಆಡುವುದನ್ನು ರೂಢಿಸಿಕೊಳ್ಳಿ ಅಂತಹ ಪಂದ್ಯಗಳಲ್ಲಿ ಆಡುವುದರಿಂದ ಉತ್ತಮ ತರಬೇತುದಾರರ ಗಮನಕ್ಕೆ ನೀವು ಬಂದರೆ ಮುಂದೆ ನಿಮಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ ಗಗನ್.

ಈಗಾಗಲೇ ಹೆಸರು ಗಳಿಸಿರುವ ಕಬ್ಬಡ್ಡಿ ಕ್ರೀಡಾಪಟುಗಳು ಅಕಾಡೆಮಿಗಳನ್ನು ತೆರೆದು ತರಬೇತಿ ನೀಡಬೇಕು ಹಾಗೂ ಸರ್ಕಾರವು ಜಿಲ್ಲಾವಾರು ಕ್ರೀಡಾ ಶಾಲೆಗಳನ್ನು ತೆರೆದು ತರಬೇತಿ ನೀಡಲು ತರಬೇತುದಾರರನ್ನು ನಿಯೋಜಿಸಿ ಉತ್ತಮ ಕ್ರೀಡಾ ವಾತಾವರಣವನ್ನು ಕಲ್ಪಿಸಿಕೊಡಬೇಕು.

ಕ್ರೀಡಾಪಟುಗಳು ಉತ್ತಮ ತಂಡವಿರುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾಭ್ಯಾಸವನ್ನು ಜೊತೆಜೊತೆಗೆ ಪಡೆಯಬೇಕು.

ಆಟವಾಡುವ ಸಂದರ್ಭದಲ್ಲಿ ಆಗಬಹುದಾದ ಕ್ರೀಡಾಗಾಯಗಳು ನಿಮ್ಮ ಮುಂದಿನ ಕ್ರೀಡಾ ಜೀವನವನ್ನು ನಾಶಗೊಳಿಸಬಹುದು ಆದ್ದರಿಂದ ಸರಿಯಾದ ವೈದ್ಯಕೀಯ ಚಿಕಿತ್ಸೆ, ವಿಶ್ರಾಂತಿ ಪಡೆದು ತರಬೇತುದಾರರ ಮಾರ್ಗದರ್ಶನದೊಂದಿಗೆ ಮರುಆಟ ಪ್ರವೇಶ ಮಾಡಬೇಕೆಂದು ತಿಳಿಸುತ್ತಾರೆ.

ಸರ್ಕಾರ ಸಾಧನೆ ಮಾಡಿದ ಕ್ರೀಡಾ ಸಾಧಕರಿಗೆ ಉದ್ಯೋಗವನ್ನು ಕಲ್ಪಿಸಿ ಕೊಡಬೇಕು ಆ ನಿಟ್ಟಿನಲ್ಲಿ ಕ್ರೀಡಾ ಮೀಸಲಾತಿಯನ್ನು ಇನ್ನಷ್ಟು ಹೆಚ್ಚಿಸಿ ನೆರವಾಗಬೇಕು ಎಂದು ವಿನಂತಿಸಿಕೊಳ್ಳುತ್ತಾರೆ ಯುವ ಕ್ರೀಡಾಪಟು.

2023ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿದ ಅಂತರ್ ವಿಶ್ವವಿದ್ಯಾನಿಲಯ ಕ್ರೀಡಾಕೂಟದಲ್ಲಿ ಭಾಗವಹಿಸಿ ಮಂಗಳೂರು ವಿಶ್ವವಿದ್ಯಾನಿಲಯ ಪ್ರಥಮ ಸ್ಥಾನಗಳಿಸುವಲ್ಲಿ ನೆರವಾಗಿದ್ದಾರೆ.

ಬೆಂಗಳೂರಿನಲ್ಲಿ ನಡೆದ 22 ವಯೋಮಾನದೊಳಗಿನ ಯುವ ಸೀರೀಸ್ ಕಬಡ್ಡಿ ಎಂಟು ರಾಜ್ಯಗಳಿಗೆ ಸಂಬಂಧಿಸಿದಂತೆ ನಡೆಸಲಾಗುವ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಉತ್ತಮ ಎರಡನೇ ರೈಡರ್ ಆಗಿ ಆಯ್ಕೆಗೊಂಡ ಪರಿಣಾಮ ಯುಪಿ ಯೋಧ ಪ್ರೊ ಕಬಡ್ಡಿ ತಂಡದವರು ಸೀಸನ್ 10 ಮತ್ತು 11ಕ್ಕೆ ಇವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಸೀಸನ್ ಹತ್ತರಲ್ಲಿ ಉತ್ತಮ ಆಟವನ್ನು ಪ್ರದರ್ಶಿಸಿ ಜನಮಾನಸದಲ್ಲಿ ನೆಲೆಯೂರಿದ್ದಾರೆ ಗಗನ್.

2024ರ ಸೀನಿಯರ್ ನ್ಯಾಷನಲ್ ತಂಡದಲ್ಲಿ ಕರ್ನಾಟಕದ ಆಟಗಾರನಾಗಿ ಅವಕಾಶ ಪಡೆದು ತರಬೇತಿ ಶಿಬಿರಕ್ಕೆ ಆಯ್ಕೆಗೊಂಡಿರುತ್ತಾರೆ.

ಇವರ ಈ ಸಾಧನೆಯನ್ನು ಪರಮ ಪೂಜ್ಯರಾದ ವೀರೇಂದ್ರ ಹೆಗಡೆಯವರು ಪ್ರಶಂಶಿಸಿ ಗೌರವಿಸಿದ್ದಾರೆ ಇದರೊಂದಿಗೆ ಸ್ಥಳೀಯರು ಹಾಗೂ ಸಂಘ–ಸಂಸ್ಥೆಗಳು ಇವರನ್ನು ಅತಿಥಿಯಾಗಿ ಗೌರವಿಸಿದೆ. ಮುಂಬರುವ ಅಂತರಾಷ್ಟ್ರೀಯ ಮಟ್ಟದಲ್ಲಿನ ಕಬಡ್ಡಿ ಪಂದ್ಯಾವಳಿಗಳಲ್ಲಿ ಭಾರತವನ್ನು ಪ್ರತಿನಿಧಿಸಿ ಕೀರ್ತಿ ತರುವ ಕನಸು ಕಂಡಿದ್ದಾರೆ ಗಗನ್ ಇವರ ಕನಸು ಕನಸಾಗಿ ಉಳಿಯದೆ ನನಸಾಗಿ ಜನಮಾನಸದಲ್ಲಿ ಇವರ ಹೆಸರು ಶಾಶ್ವತವಾಗಿ ಉಳಿಯಲೆಂದು ನಾವೆಲ್ಲರೂ ಹಾರೈಸೋಣ.

## ಬದುಕನ್ನು ಆಹ್ಲಾದಗೊಳಿಸುವ ಕನಸುಗಳಿಗೆ ಹೀಗೊಂದು ದಾರಿ...

# ನೀಟ್ ಪರೀಕ್ಷೆ ಬರೆಯದೇ ಡಾಕ್ಟರ್...!?

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ ) ವೃತ್ತಿಪರ ಕೋರ್ಸ್ಗಳ ಪ್ರವೇಶಕ್ಕಾಗಿ ವಾರ್ಷಿಕವಾಗಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಾದ ಸಿಇಟಿಯ ಫಲಿತಾಂಶ ಪ್ರಕಟಗೊಂಡಿದ್ದು, ಹಲವಾರು ವಿದ್ಯಾರ್ಥಿಗಳು ತಮ್ಮ ಕನಸಿನ ಬಂಡಿಯನ್ನು ಯಾವ ದಿಸೆಯತ್ತ ಕೊಂಡೊಯ್ಯಬೇಕು ಎನ್ನುವುದರ ಚಿಂತೆಯಲ್ಲಿದ್ದಾರೆ ಜೀವಶಾಸ್ತ್ರದ ವಿದ್ಯಾರ್ಥಿಗಳು ವೈದ್ಯಕೀಯ ಸೀಟಿನ ನಿರೀಕ್ಷೆಯಲ್ಲಿ ನೀಟ್ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ.

ನೀಟ್ ಪರೀಕ್ಷೆ ಬರೆಯದೇ ಡಾಕ್ಟರ್...!?

ಕರ್ನಾಟಕದಲ್ಲಿ ಸಿಇಟಿ ಫಲಿತಾಂಶದ ಮೇಲೆ ಲಭ್ಯವಿರುವ ಏಕೈಕ ವೈದ್ಯಕೀಯ ಕೋರ್ಸ್ ಎಂದರೆ ಅದು ಬಿ.ಎನ್.ವೈ. ಎಸ್. (ಬ್ಯಾಚುಲರ್ ಆಫ್ ನ್ಯಾಚುರೋಪತಿ ಆಂಡ್ ಯೋಗಿಕ್ ಸೈನ್ಸ್) ನ್ಯಾಚುರೋಪತಿ ಎನ್ನುವುದು ನೈಸರ್ಗಿಕ ಚಿಕಿತ್ಸಾ ವ್ಯವಸ್ಥೆಯಾಗಿದ್ದು ಪಂಚ ಮಹಾಭೂತಗಳಿಂದ ನಿರ್ಮಿತವಾದ ಶರೀರಕ್ಕೆ ಪಂಚಮಹಾ ಭೂತಗಳಿಂದಲೇ ಚಿಕಿತ್ಸೆಯನ್ನು ಕೊಡುವಂತಹ ಯಾವುದೇ ರಾಸಾಯನಿಕ ಮತ್ತು ಔಷಧಿಗಳನ್ನು ಬಳಸದೆ ದೇಹವನ್ನು ಒಳಗಿನಿಂದಲೇ ಬಲಪಡಿಸುವ ವಿಶಿಷ್ಟ ಚಿಕಿತ್ಸಾ ವಿಧಾನವಾಗಿದೆ. ಆಹಾರವೇ ಔಷಧ ಎನ್ನುವ ಸಿದ್ಧಾಂತವನ್ನು ಅಗಾಧವಾಗಿ ನಂಬಿದ್ದು ಇದರಲ್ಲಿ ಉತ್ತಮ ಪೌಷ್ಟಿಕಾಂಶಯುಕ್ತ ಆಹಾರ ಸೇವನೆಗೆ ಆದ್ಯತೆ ನೀಡಲಾಗಿದೆ. ಐದು ಸಹಸ್ರ ವರ್ಷಗಳಿಗಿಂತಲೂ ಪುರಾತನವಾದ ಭಾರತೀಯ ತತ್ವಶಾಸ್ತ್ರವಾದ ವೇದಗಳಲ್ಲಿ ಉಲ್ಲೇಖವಾದ ಯೋಗವು ವ್ಯಾಯಮ ಮತ್ತು ಉಸಿರಾಟವನ್ನು ಸಂಯೋಜಿಸುವ ಮೂಲಕ ದೇಹ ಮತ್ತು ಮನಸ್ಸನ್ನು ಸಮತೋಲನದಲ್ಲಿಡಲು ಸಹಾಯಕಾರಿಯಾಗಿದೆ. ಸತತ ಯೋಗಾಭ್ಯಾಸ ದಿಂದ ಮಧುಮೇಹ , ರಕ್ತದೊತ್ತಡ ಮುಂತಾದ ಖಾಯಿಲೆಗಳನ್ನು ಹತೋಟಿಯಲ್ಲಿಡಲು ಸಹಕಾರಿಯಾಗುತ್ತದೆ. ಭಾರತವನ್ನೂ ಸೇರಿ ಹೊರದೇಶಗಳಲ್ಲಿ ಅತ್ಯಂತ ಬೇಡಿಕೆ ಇರುವ ಅಕ್ಯುಪ್ರೆಷರ್, ಅಕ್ಯುಪಂಕ್ಚರ್ ಮುಂತಾದ ಚಿಕಿತ್ಸೆಗಳು ನೋವುಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ನಾಚುರೋಪತಿಯಲ್ಲಿ ಲಭ್ಯವಿರುವ ಚಿಕಿತ್ಸೆಗಳು : ಮರ್ದನ ಚಿಕಿತ್ಸೆ, (ಮಸಾಜ್ ಥೆರಪಿ) ಮೃತ್ತಿಕಾ(ಮಡ್ ಥೆರಪಿ) ಚಿಕಿತ್ಸೆ,ಅಯಸ್ಕಾಂತ ಚಿಕಿತ್ಸೆ(ಮಗ್ನೆಟೊ ಥೆರಪಿ),ಜಲಚಿಕಿತ್ಸೆ (ಹೈಡ್ರೋಥೆರಪಿ ), ಪಥ್ಯಾಹಾರ ಚಿಕಿತ್ಸೆ (ಡಯೆಟ್)



ಆಕ್ಯುಪ್ರೆಷರ್, ಅಕ್ಯುಪಂಕ್ಚರ್,ಯೋಗ ಥೆರಪಿ,ಹಾಟ್ ಸ್ಟೋನ್ ಥೆರಪಿ, ಬ್ಲಡ್ ಕಪ್ಪಿಂಗ್ ಇತ್ಯಾದಿ.

**ಬಿ ಎನ್ ವೈ ಎಸ್ ಕಾಲೇಜುಗಳಲ್ಲಿ ಬೋಧಿಸಲಾಗುವ ವಿಷಯಗಳು:** ಮಾನವ ಅಂಗರಚನಾಶಾಸ್ತ್ರ, (ಹ್ಯೂಮನ್ ಅನಾಟಮಿ) ಜೀವರಸಾಯನಶಾಸ್ತ್ರ (ಬಯೋಕೆಮಿಸ್ಟ್ರಿ),ಸೂಕ್ಷ್ಮ ಜೀವವಿಜ್ಞಾನ(ಮೈಕ್ರೋ ಬಯಾಲಜಿ), ಯೋಗ ತತ್ವಶಾಸ್ತ್ರಸಮುದಾಯ ಔಷಧ (ಕಮ್ಯುನಿಟಿ ಮೆಡಿಸಿನ್), ಬೇಸಿಕ್ ಫಾರ್ಮಕಾಲಜಿ, ಫಾರೆನ್ಸಿಕ್ ಮತ್ತು ಟಾಕ್ಸಿಕಾಲಜಿ ಉಪವಾಸ ಮತ್ತು ಆಹಾರ ಚಿಕಿತ್ಸೆ, ಮನೋವಿಜ್ಞಾನ, ಪ್ರಸೂತಿ,ಸ್ತ್ರೀರೋಗ ಶಾಸ್ತ್ರ, ಪ್ರಕೃತಿ ಚಿಕಿತ್ಸೆ, ಕಾಂತೀಯ ಚಿಕಿತ್ಸೆ,ಜಲ ಚಿಕಿತ್ಸೆ,ಪಂಚಮಹಾಭೌತಿಕ ಚಿಕಿತ್ಸೆ

**ಕರ್ನಾಟಕದಲ್ಲಿ ನ್ಯಾಚುರೋಪತಿ ಕಾಲೇಜುಗಳು**

1.ಸರ್ಕಾರಿ ಪ್ರಕೃತಿಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು
2.ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ, ಉಜಿರೆ
4.ಆಳ್ವಾಸ್ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜು ಮೂಡಬಿದಿರೆ
4.ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ಬೆಂಗಳೂರು
5.ಶ್ರೀ ಜಗದ್ಗುರು ಗುರುಸಿದ್ದೇಶ್ವರ ಆಪರೇಟಿವ್ ಹಾಸ್ಪಿಟಲ್ ಸೊಸೈಟಿ ಘಟಪ್ರಭಾ , ಬೆಳಗಾವಿ
6.ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವಿದ್ಯಾಲಯ , ತಲಪಾಡಿ ಮಂಗಳೂರು
7.ಜನನಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜು, ಹರಪ್ಪನ ಹಳ್ಳಿ.
8.ತಪೋವನ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜು , ದಾವಣಗೆರೆ
9. ಜಿ. ಮಾದೇಗೌಡ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಸಂಸ್ಥೆ ಮಂಡ್ಯ
ಮುನಿಯಾಳ್ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಸಂಸ್ಥೆ, ಮಂಗಳೂರು
10.ಯೆನಪೋಯ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಕಾಲೇಜು, ಮಂಗಳೂರು
11.ಎಂ ವಿ ಎಂ ನ್ಯಾಚುರೋಪತಿ ಮತ್ತು ಯೋಗ ಕಾಲೇಜು ಬೆಂಗಳೂರು

ನಾಲ್ಕು ವರೆ ವರ್ಷ ಅಭ್ಯಾಸ , ಒಂದು ವರ್ಷ ವೃತ್ತಿಪರ ತರಬೇತಿ ಒಟ್ಟೂ ಐದುವರೆ ವರ್ಷದ ಬಿ.ಎನ್.ವೈ.ಎಸ್. ಕೋರ್ಸ್ ಮುಗಿಸಿದ ನಂತರ



ಚೈತ್ರಾ, ಹವ್ಯಾಸಿ ಬರಹಗಾರ್ತಿ
ಬಿಎನ್‌ವೈಎಸ್ ವಿದ್ಯಾರ್ಥಿನಿ

Hampi Times E-paper
SCAN AND READ

ಸ್ನಾತಕೋತ್ತರ ಪದವಿ ಗೆ ಇರುವ ಅವಕಾಶಗಳು :
**ಎಂ.ಡಿ. ಇನ್ ನ್ಯಾಚುರೋಪತಿ**
**ಎಂ.ಡಿ.ಇನ್ ಡಯೆಟ್ ಆಂಡ್ ನ್ಯೂಟ್ರಿಷನ್**
**ಎಂ.ಡಿ. ಇನ್ ಕ್ಲಿನಿಕಲ್ ಯೋಗ**
**ಎಂ.ಡಿ.ಇನ್ ಅಕ್ಯುಪಂಕ್ಚರ್**
ಡಯೆಟ್, ಅನಾಟಮಿ, ಮನೋರೋಗ, ಮುಂತಾದ ವಿಷಯಗಳಲ್ಲಿ ಎಂ.ಎಸ್ಸಿ. ಮಾಡುವ ಅವಕಾಶ ಸಂಬಂಧಿತ ವಿಷಯದ ಮೇಲೆ ಸ್ನಾತಕೋತ್ತರ ಪದವಿ ಮಾಡಲು ಮುಕ್ತ ಅವಕಾಶವಿರುತ್ತದೆ .

ಐದು ವರೆ ವರ್ಷದ ಬಿ. ಎನ್. ವೈ .ಎಸ್. ಕೋರ್ಸ್ ಮುಗಿದ ನಂತರ ಯಾವುದೇ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಬಹುದು. ವೈದ್ಯಕೀಯ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಬಹುದು.

ಬಿಎನ್‌ವೈಎಸ್‌ಗೆ ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು +2 ಅನ್ನು ಪಿಸಿಬಿಯೊಂದಿಗೆ ಕಡ್ಡಾಯ ವಿಷಯಗಳಾಗಿ ಉತ್ತೀರ್ಣರಾಗಿರಬೇಕು ಮತ್ತು ಪರೀಕ್ಷೆಯಲ್ಲಿ ಕನಿಷ್ಠ 50 ಪ್ರತಿಶತ ಅಂಕಗಳನ್ನು ಗಳಿಸಿರಬೇಕು. ಪಿಯುಸಿ ಮುಗಿಸಿ ಪ್ರತಿಷ್ಠಿತ ಕಾಲೇಜುಗಳಲ್ಲಿ ಅಭ್ಯಾಸ ಮಾಡಲು ಆಸಕ್ತಿ ಇರುವ ವಿದ್ಯಾರ್ಥಿಗಳ ಜೀವನದಲ್ಲಿ ಇದು ನಿರ್ಣಾಯಕ ಹಂತವಾಗಿದ್ದು, ಸೂಕ್ತವಾದ ಆಯ್ಕೆ ಬದುಕಿನ ದಾರಿಯನ್ನು ಸುಗಮವಾಗಿಸುವಲ್ಲಿ ಸಹಕಾರಿಯಾಗಿದೆ.

**ಕವಿ ಮನಸು**

## ಬಂಧನವಾಗದಿರಲಿ ಈ ಸಂಬಂಧ

ಗಂಡೆಂದ ಮಾತ್ರಕ್ಕೆ ಅವನ ಮನಸ್ಸು ಕಲ್ಲು ಬಂಡೆಯೇ
ಅವನನ್ನು ಸಿಲುಕಿಸಿ ನಲುಗಿಸಿದೆ
ಬಂಧಗಳ ಬಲೆ
ಸಂಬಂಧಗಳ ಸ್ವಾರ್ಥದಲಿ ಅವನ
ಅನಿಸಿಕೆಗೆ ಎಲ್ಲಿದೆ ಬೆಲೆ.

ತಾಯಿಗೆ ತಕ್ಕ ಮಗ, ಮಕ್ಕಳಿಗೆ ಆದರ್ಶ
ಅಪ್ಪನಾಗಬೇಕು
ಪತ್ನಿಗೆ ಒಪ್ಪುವ ಪತಿ, ಸಮಾಜಕ್ಕೆ
ಸತ್ಪ್ರಜೆಯಾಗಬೇಕು
ಆದರೆ,ಯಾರು ಸಹ ಕೇಳರು ಅವನಿಗೆ
ಏನು ಬೇಕು?

ಓದಿ ಒಳ್ಳೆಯ ಕೆಲಸ ಸೇರಿ ಜೀವನದಲ್ಲಿ
ಯಶಸ್ಸು ಕಾಣಬೇಕು
ಕಷ್ಟವೇನಿಸಿದರು ತನ್ನವರ ಹಿತಕ್ಕಾಗಿ
ದುಡಿಯಬೇಕು
ಒಂದಲ್ಲ, ಎರಡಲ್ಲ ಎಲ್ಲ ಜವಾಬ್ದಾರಿ
ಹೊತ್ತು ಸಾಗಬೇಕು.

ಅತ್ತರಷ್ಟೇ ನೋವಾಗಿದೆ ಎಂದು
ಅರ್ಥವೇ!
ತನ್ನವರೊಂದಿಗೆ ಪ್ರೀತಿಯ
ಮಾತನಾಡದಿದ್ದರೆ ಅಕ್ಕರೆಯಿಲ್ಲವೇ?
ಎಲ್ಲವೂ ಅವನಲ್ಲಿ ಉದುಗಿದೆ ನವಿರು
ಭಾವನೆ ಅರಿತಿಲ್ಲವೇ?

ಎಷ್ಟೇ ಬಲಶಾಲಿಯಾದರೂ ಶಕ್ತಿ
ತುಂಬಲು ಸಂಬಂಧ ಬೇಕು
ದಣಿದ ದೇಹ ಮನಸ್ಸಿಗೆ ಸ್ಪಂದಿಸುವ
ಪ್ರೀತಿಯ ಮನ ಬೇಕು
ಸಂಬಂಧಗಳ ಬಂಧವೂ ಆಗಲಿ
ಅನುಬಂಧ
ಬಂಧನವಾಗದಿರಲಿ ಈ ಸಂಬಂಧ.

– ಮಂಜುಶ್ರೀ ಮುರಳೀಧರ್.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**04–06–2024 – ಮಂಗಳವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಭರಣಿ |
| ಯೋಗ | : ಶೋಭನ |
| ಕರಣ | : ಗರಜ |
| ಸೂರ್ಯೋದಯ | : 05:41:52 |
| ಸೂರ್ಯಾಸ್ತ | : 19:08:59 |
| ರಾಹು | : 15:47–17:28 |
| ಯಮಘಂಡ | : 09:04–10:45 |
| ಗುಳಿಕ | : 12:25–14:06 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 03–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.59 ಅಡಿ |
| ಒಳ ಹರಿವು | 637 ಕ್ಯುಸೆಕ್ |
| ಹೊರ ಹರಿವು | 25 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.412 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1580.82 ಅಡಿ |
| ಒಳ ಹರಿವು | 1041 ಕ್ಯುಸೆಕ್ |
| ಹೊರ ಹರಿವು | 244 ಕ್ಯುಸೆಕ್ |
| ಸಾಮರ್ಥ್ಯ | 4.883 ಟಿಎಂಸಿ |

ಉಚಿತ-ಖಚಿತ!
ಪತ್ರಿಕೆಯ ಓದು ಕಣ್ಣಿಗೆ ಹಿತ,
ಮೊಬೈಲ್ ಓದು ಉಚಿತ,
ಕಣ್ಣಿಗೆ ಹಾನಿ ಖಚಿತ!

ಮಕ್ಕಳ ಕೈಗೆ ಮೊಬೈಲ್ ಬದಲಿಗೆ, ಪತ್ರಿಕೆ ನೀಡಿ ಬದಲಾವಣೆ ಕಾಣಿರಿ...
ಸ್ಥಳೀಯ ಸುದ್ದಿಗಳಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ
ಹಂಪಿ ಟೈಮ್ಸ್ ಬಳಗದ ಕಳಕಳಿ
ಬೆಲೆ ರೂ 2

# ಬಳ್ಳಾರಿ ಶೇ.67.78 ರಷ್ಟು ಈಶಾನ್ಯ ಪದವೀಧರರಿಂದ ಸುಸೂತ್ರ ಮತದಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆಗೆ ಮತದಾನ ದಿನವಾದ ಜೂ.03 ಸೋಮವಾರದಂದು ಬಳ್ಳಾರಿ ಜಿಲ್ಲೆಯಲ್ಲಿ ಸುಸೂತ್ರವಾಗಿ ನಡೆಯಿತು. ಅಂತಿಮ ವರದಿಯಂತೆ ಶೇ.67.78 ರಷ್ಟು ಮತದಾನವಾಗಿದೆ.

ಕಂಪ್ಲಿ, ಸಿರುಗುಪ್ಪ, ಬಳ್ಳಾರಿ ಗ್ರಾಮೀಣ, ಬಳ್ಳಾರಿ ನಗರ ಮತ್ತು ಸಂಡೂರು ವಿಧಾನಸಭಾ ಕ್ಷೇತ್ರ ಒಳಗೊಂಡಂತೆ 14,981 ಪುರುಷರು, 9,198 ಮಹಿಳೆಯರು ಮತ್ತು 4 ಜನ ಇತರೆ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 24,183 ಪದವೀಧರ ಮತದಾರರು ನೋಂದಾಯಿಸಿ ಕೊಂಡಿದ್ದರು. ಅದರಲ್ಲಿ 10,555 ಪುರುಷರು, 5,837 ಮಹಿಳೆಯರು ಸೇರಿದಂತೆ 16,392 ಮತದಾರರು ತಮ್ಮ ಮತದಾನದ ಹಕ್ಕು ಚಲಾಯಿಸಿದ್ದಾರೆ.

ಜಿಲ್ಲೆಯಲ್ಲಿ ಬಹುತೇಕ ಬೆಳಿಗ್ಗೆಯಿಂದಲೇ ಬಿರುಸಿನ ಮತದಾನ ಮಾಡುವುದು ಕಂಡುಬಂತು.

ಬಳ್ಳಾರಿ ನಗರ ಕ್ಷೇತ್ರದ ಬಾಲ ಭಾರತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಎರಡು ಮತದಾನ ಕೇಂದ್ರಗಳಿದ್ದು, ಪದವೀಧರ ಮತದಾರರು ಸಾಲುಗಟ್ಟಿ ಬಂದು ತಮ್ಮ ಮತದಾನ ಹಕ್ಕು ಚಲಾಯಿಸಿದರು.

ಅದರಂತೆ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಮೋಕಾ ಗ್ರಾಮ ಪಂಚಾಯತ್ ಕಚೇರಿಯ ಮತಗಟ್ಟೆ ಕೇಂದ್ರದಲ್ಲಿ ಪದವೀಧರ ಯುವ ಮತದಾರರು, ಶಿಕ್ಷಕರು ತಮ್ಮ ಮತದಾನ ಹಕ್ಕು ಚಲಾಯಿಸಿ ಮತದಾನ ಶಾಹಿ ಬೆರಳು ತೋರಿಸಿ ಖುಷಿಪಟ್ಟರು.

ಮತದಾನ ಕೇಂದ್ರಗಳಿಗೆ ಬರುವ ಮತದಾರರ ಹೆಸರು, ನೋಂದಣಿ ಸಂಖ್ಯೆ ಮತ್ತು ಕ್ರಮ ಸಂಖ್ಯೆ ಹುಡುಕಿ ಕಳುಹಿಸುವ ಕಾರ್ಯ ಮತಗಟ್ಟೆ ಅಧಿಕಾರಿಗಳು ಮಾಡಿದರು.ಬಳ್ಳಾರಿ ಜಿಲ್ಲೆಯ ಒಟ್ಟು 24 ಮತಗಟ್ಟೆ ಕೇಂದ್ರಗಳಿಗೆ ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು.

# ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಸಾರ್ವಜನಿಕರ ಕುಂದು-ಕೊರತೆ ಅಹವಾಲು ಸ್ವೀಕಾರ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗ ಪೊಲೀಸ್ ಅಧಿಕಾರಿಗಳಿಂದ ಬಳ್ಳಾರಿ, ಕಂಪ್ಲಿ ಮತ್ತು ಸಂಡೂರು ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಅಹವಾಲು ಸ್ವೀಕಾರ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

*ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ:*

ಜೂ.06 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಕಂಪ್ಲಿ ತಹಶೀಲ್ದಾರರ ಕಚೇರಿ ಸಭಾಂಗಣ.

ಜೂ.12 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಬಳ್ಳಾರಿಯ ಹೊಸ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣ.

ಜೂ.19 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣ.

ಸಾರ್ವಜನಿಕರು ತಮ್ಮ ಕುಂದು-ಕೊರತೆ ಅವಹಾಲುಗಳಿದ್ದಲ್ಲಿ ನಿಗದಿತ ದಿನ ಮತ್ತು ಸ್ಥಳದಲ್ಲಿ ನಡೆಯುವ ಸಭೆ ಹಾಜರಾಗಿ ತಮ್ಮ ಅಹವಾಲು ಸಲ್ಲಿಸಬಹುದು. ಅರ್ಜಿಗಳನ್ನು ಸ್ವೀಕರಿಸಿ ವಿಚಾರಿಸಲಾಗುತ್ತದೆ ಹಾಗೂ ಸಾರ್ವಜನಿಕರಿಗೆ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿಗಳನ್ನು ಸಲ್ಲಿಸಲು ನಮೂನೆ/ಫಾರಂ ನಂ.1 ಮತ್ತು 2 ಸಹ ನೀಡಲಾಗುವುದು ಎಂದು ತಿಳಿಸಿದ್ದಾರೆ.

# ಬುದ್ಧ ಶಾಂತಿಯ ಪ್ರತೀಕವಾದರೆ, ನಾಲ್ವಡಿ ಕೃಷ್ಣರಾಜ ಒಡೆಯರು ಅಭಿವೃದ್ಧಿಯ ಪ್ರತೀಕ

**ಪ್ರಾಧ್ಯಾಪಕ ಡಾ.ಮೋಹನ್ ಕೃಷ್ಣ ರೈ ಅಭಿಮತ । ಗೌತಮಬುದ್ಧ, ಒಡೆಯರ ಜಯಂತಿ ಕಾರ್ಯಕ್ರಮ**



■ **ಹಂಪಿ ಟೈಮ್ಸ್ ಹೊಸಪೇಟೆ**

ಬುದ್ಧನೆಂದರೆ ಜಾಗೃತಿ, ಎಚ್ಚರ, ಪ್ರಜ್ಞೆ ಮತ್ತು ಜ್ಞಾನದ ಬೆಳಕು. ಬುದ್ಧನನ್ನು ಪ್ರತಿಮೆಗಳಲ್ಲಿ, ವಿಹಾರಗಳಲ್ಲಿ, ಪುಸ್ತಕಗಳಲ್ಲಿ ಹುಡುಕಿದರೆ ಸಿಗುವುದಿಲ್ಲ. ನಮ್ಮೊಳಗಿನ ಚಿಂತನೆಗಳಲ್ಲಿ, ಆಲೋಚನೆಯಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ಪ್ರಜ್ಞೆ ಮೂಡಿದಾಗ ಬುದ್ಧನ ದರ್ಶನವಾಗುತ್ತದೆ ಎಂದು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಮೋಹನ್ ಕೃಷ್ಣ ರೈ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಸೋಮವಾರ ದಲಿತ ಸಂಸ್ಕೃತಿ ಅಧ್ಯಯನ ಪೀಠದ ವತಿಯಿಂದ ಆಯೋಜಿಸಲಾಗಿದ್ದ 2568ನೇ ಭಗವಾನ್ ಗೌತಮ ಬುದ್ಧ ಹಾಗೂ 140ನೇ ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ ಕಾರ್ಯಕ್ರಮದಲ್ಲಿ

ಮಾತನಾಡಿದರು. ಬುದ್ಧನ ಹುಟ್ಟು ಮತ್ತು ಸಾವಿಗೆ ಕಾಲಘಟ್ಟಗಳು ಇರಬಹುದು. ಆದರೆ ಬುದ್ಧನ ಚಿಂತನೆಗಳು ಮತ್ತು ಆಲೋಚನೆಗಳಿಗೆ ಯಾವುದೇ ರೀತಿಯ ಕಾಲಘಟ್ಟಗಳಿಲ್ಲ. ಪ್ರಜಾಪ್ರಭುತ್ವದಲ್ಲಿ ರಾಜಪ್ರಭುತ್ವದ ಲಕ್ಷಣಗಳು, ಊಳಿಗಮಾನ್ಯ ಪದ್ಧತಿ, ಬಂಡವಾಳಶಾಹಿ ಪದ್ಧತಿ, ರಾಜ್ಯ ಭಾಷೆಯ ಮುಂದೆ ಆಡು ಭಾಷೆಗಳು ಪ್ರಾಮುಖ್ಯ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಬುದ್ಧನ ಆಲೋಚನ ದೃಷ್ಟಿ, ಜೀವನ ಶೈಲಿ ಹಾಗೂ ಚಿಂತನೆಗಳು ಪ್ರಸ್ತುತತೆಯನ್ನು ಪಡೆಯುತ್ತವೆ. ಜಾಗತೀಕರಣವು ಮಾನವೀಯತೆಯ ಜಾಗತೀಕರಣವಾಗಬೇಕು. ಬುದ್ಧನ ಆಧ್ಯಾತ್ಮಿಕ ಬೋಧನೆಯಲ್ಲಿ ವೈಜ್ಞಾನಿಕ, ಮಾನವೀಯ, ವಾಸ್ತವಿಕ ನೆಲೆಯನ್ನು ನಾವು ಕಾಣಬಹುದು. ಬದುಕಿನ ದುಃಖಗಳಿಂದ ಹೊರಬರುವುದು, ಆಸೆಯನ್ನು ನಿಯಂತ್ರಿಸುವುದು ಮತ್ತು ಲೋಕವನ್ನು ಅರ್ಥ ಮಾಡಿಕೊಳ್ಳಲು ಬುದ್ಧ ಅಷ್ಟಾಂಗ ಮಾರ್ಗ ಎಂಬ ಮಧ್ಯಮ ಮಾರ್ಗವನ್ನು ಪ್ರತಿಪಾದಿಸಿದನು. ಆದರೆ ಇಂದು ಭಾರತವನ್ನು ಬೆಸೆಯುವ ಕೊಂಡಿಗಳು ದೂರವಾಗಿ ಭಾರತವನ್ನು ಒಡೆಯುವ ಕೊಂಡಿಗಳು ಹತ್ತಿರವಾಗುತ್ತಿರುವುದು ದುರಂತದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು.

ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರು ಸಂವಿಧಾನದ ಆಶಯಗಳನ್ನು 1910ರಲ್ಲೇ ಒಂದಷ್ಟು ಜಾರಿಗೆ ತರುವ ಮೂಲಕ ಅಭಿವೃದ್ಧಿಯ ಹರಿಕಾರರಾಗಿದ್ದರು. ಕೃಷ್ಣರಾಜ ಸಾಗರ ಆಣೆಕಟ್ಟು, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತು ಹೀಗೆ ಹಲವಾರು ಕಾರ್ಯಗಳನ್ನು ಮಾಡುವುದರ ಮೂಲಕ ಮೈಸೂರನ್ನು ಮಾದರಿ ರಾಜ್ಯವನ್ನಾಗಿ ರೂಪಿಸದ್ದರು. ಮಹಾತ್ಮ ಗಾಂಧೀಜಿಯವರು ಇವರ ಕಾರ್ಯಗಳನ್ನು ಮೆಚ್ಚಿ ಇವರನ್ನು ರಾಜಶ್ರೀ ಮತ್ತು ಮೈಸೂರು ರಾಜ್ಯವನ್ನು ಮಾದರಿ ರಾಜ್ಯ ಎಂದು ಕರೆದಿರುವುದು ನಾಲ್ವಡಿ ಅವರ ಸಾಧನೆಗೆ ಹಿಡಿದ ಕನ್ನಡಿ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಿ.ವಿ. ಪರಮಶಿವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲದಿಂದ ಕಾಲಕ್ಕೆ ಅನೇಕ ಸಮಾಜ ಸುಧಾರಕರು ಮತ್ತು ಮಹಾನುಭಾವರು ಜನ್ಮತಾಳಿ ಬಂದರೂ, ನಾವು ಇನ್ನೂ ಬದಲಾಗದೆ ಇರೋದೇ ಒಂದು ದೊಡ್ಡ ದುರಂತ. ಭಗವಾನ್ ಬುದ್ಧ ತನ್ನ ಚಿಂತನೆಗಳೂ ಮತ್ತೂ ಆಚರಣೆಗಳ ಮೂಲಕ ಜಗತ್ತನ್ನು ಬದಲಾಯಿಸುವುದಕ್ಕೆ ಪ್ರಯತ್ನಪಟ್ಟರು. ನಾಲ್ವಡಿ ಕೃಷ್ಣರಾಜ ಒಡೆಯರು ಆರ್ಥಿಕತೆ ಮತ್ತು ರಾಜಕೀಯದ ಮೂಲಕ ಸಮಾಜ ಸುಧಾರಣೆಯಲ್ಲಿ ತೊಡಗಿಸಿಕೊಂಡಿದ್ದರು.

ಈ ಕಾರ್ಯಕ್ರಮದಲ್ಲಿ ಚರಿತ್ರೆ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ದಲಿತ ಅಧ್ಯಯನ ಪೀಠದ ಸಂಚಾಲಕರಾದ ಡಾ.ಚಿನ್ನಸ್ವಾಮಿ ಸೋಸಲೆ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಶೋಧನಾ ವಿದ್ಯಾರ್ಥಿ ಮಣಿಕಂಠ ಅಂಗಳ ನಿರೂಪಿಸಿದರು. ಶ್ರೇಯಸ್ ವಂದಿಸಿದರು.

**ಆತ್ಮೀಯ ಓದುಗರೆ, ಬರಹಗಾರರೇ, ಜಾಹೀರಾತುದಾರರೇ ಹಾಗೂ ಪತ್ರಿಕೆಯ ಹಿತೈಷಿಗಳೇ,**

21 ಜೂನ್ 2024ಕ್ಕೆ ಹಂಪಿ ಟೈಮ್ಸ್ ಕನ್ನಡ ದಿನಪತ್ರಿಕೆ ಮೊಲದ ವಸಂಥದ ಸಂಭ್ರಮ. ನಿಮ್ಮೆಲ್ಲರ ಸಹಕಾರದಿಂದ ಅಂದು ವಿಶೇಷ ಸಂಚಿಕೆ ಹೊರಬರಲಿದೆ. ಹಂಪಿ ಟೈಮ್ಸ್ ಪತ್ರಿಕೆ ಕುರಿತು ಚುಟುಕು, ಕವನ, ಅನಿಸಿಕೆಗಳನ್ನು ಸ್ವೀಕರಿಸಲಾಗುವುದು. ಹಂಪಿ ಟೈಮ್ಸ್ ಮೊದಲ ಸಂಭ್ರಮೋತ್ಸವ ಶೀರ್ಷಿಕೆಯಡಿ ನಿಮ್ಮ ಅಭಿಪ್ರಾಯಗಳನ್ನು ಕಳಿಸಬಹುದು. ಅಭಿಪ್ರಾಯದ ಜೊತೆ ನಿಮ್ಮ ಹೆಸರು, ಊರು, ಭಾವಚಿತ್ರ, ಸಂಪರ್ಕ ನಂಬರ್ ಇರಲಿ.

**ಸಂಪಾದಕ, ಹಂಪಿ ಟೈಮ್ಸ್ ವಿಜಯನಗರ ಜಿಲ್ಲೆ** ಮೊ: 9448633038 hampitimes@gmail.com

# ಮಳೆಗೆ ಸಂಚಾರ ಅಸ್ತವ್ಯಸ್ಥ, ಪರದಾಡಿದ ರೋಗಿಗಳು



ಹೊಸಪೇಟೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳ ಕಛೇರಿ ಆವರಣದಲ್ಲಿರುವ ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ಪಾರ್ಶುವಾಯು ಮತ್ತಿತರ ಕಾಯಿಲೆಗೆ ಚಿಕಿತ್ಸೆ ಪಡೆಯಲು ತೆರಳುವ ರೋಗಿಗಳು, ಆಸ್ಪತ್ರೆಯ ಪ್ರವೇಶದಲ್ಲೇ ತಗ್ಗುಪ್ರದೇಶದಲ್ಲಿ ಮಳೆ ನೀರು ನಿಂತಿದ್ದರಿಂದ ತೀವ್ರ ತೊಂದರೆ ಅನುಭವಿಸಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ತೊಂದರೆಯಾಗದಂತೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದು ಚಿಕಿತ್ಸೆಗಾಗಿ ಬಂದಿದ್ದ ಎಸ್.ಎಂ.ಭಾಷ ಆಗ್ರಹಿಸಿದರು.



ವಿಜಯನಗರ ಜಿಲ್ಲೆ ಹೊಸಪೇಟೆ ರಾಯರ ಕೆರೆಯಲ್ಲಿ ಮಳೆ ನೀರಿನಲ್ಲಿ ಸಿಲುಕಿದ ಟ್ರ್ಯಾಕ್ಟರ್



ಹೊಸಪೇಟೆ ತಾಲೂಕಿನ ಕಾರಿಗನೂರಿನ ಹೊರವಲಯದಲ್ಲಿ ಕೃಷಿ ಭೂಮಿಯಲ್ಲಿ ಬಿತ್ತನೆಗೊಂಡ ಬೆಳೆ ಸಹಿತ ಮಣ್ಣು ನೀರಿಗೆ ಕೊಚ್ಚಿಹೋಗಿರುವುದು.



ಹೊಸಪೇಟೆ ನಗರದ ಹಂಪಿ ರಸ್ತೆಯಲ್ಲಿ ಸುಸಜ್ಜಿತ ಚರಂಡಿ ವ್ಯವಸ್ಥೆ ಇಲ್ಲದಿರುವುದು ಮತ್ತು ರಸ್ತೆ ಅವೈಜ್ಞಾನಿಕವಾಗಿ ನಿರ್ಮಿಸಿದ್ದರಿಂದ ಮಳೆ ರಸ್ತೆಯಲ್ಲಿ ನಿಲ್ಲುವುದರಿಂದ ವಾಹನ ಸವಾರರು ತೊಂದರೆ ಅನುಭವಿಸುವುದು ತಪ್ಪುತ್ತಿಲ್ಲ.

# ಬಿ ದ ಚೇಂಜ್‌ವತಿಯಿಂದ ಆಹಾರ ಪರಿಕರ ಕಿಟ್ ವಿತರಣೆ




■ **ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ಬಿ ದ ಚೇಂಜ್ ಹೊಸಪೇಟೆ, ಇನಿಶಿಯೇಟಿವ್ ಆಫ್ ಕಾಗ್ನಿಷನ್ ಸೋಷಲ್ ಇನ್ನೋವೇಶನ್ ಅಂಡ್ ರಿಸರ್ಚ್ ಸೆಂಟರ್ ಸ್ವಯಂಸೇವಕ ಸಂಸ್ಥೆಯು ಜೊತೆಗೂಡಿ, ಮಾನವೀಯ ಕಾರ್ಯದ ಭಾಗವಾಗಿ, ನಗರದ ಸಂಡೂರು ರಸ್ತೆಯಲ್ಲಿರುವ ಆರ್ಥಿಕವಾಗಿ ಹಿಂದುಳಿದಿದ ನಿವಾಸಿಗಳಿಗೆ ಆಹಾರ ಪರಿಹಾರ ಕಿಟ್‌ಗಳನ್ನು ಅಮೆಜಾನ್ ಸಹಯೋಗದೊಂದಿಗೆ ಭಾನುವಾರ ವಿತರಿಸಿತು.

150 ಕ್ಕೂ ಹೆಚ್ಚು ಬಡಕುಟುಂಬಗಳನ್ನು ಗುರುತಿಸಿ ಪೌಷ್ಟಿಕಾಂಶದ ಆಹಾರದ ಕಿಟ್‌ಗಳನ್ನು ನೀಡಲಾಗಿದೆ ಎಂದು ಕಾಗ್ನಿಷನ್ ಇಂಡಿಯಾ ಟ್ರಸ್ಟಿ ರವಿರಾಜ್.ಯು ಮತ್ತು ಅವರ ಸಹ ಸಂಸ್ಥಾಪಕಿ ಸಂಪದ.ಎಚ್ ತಿಳಿಸಿದ್ದಾರೆ. ಸದಸ್ಯ ಕುಮಾರ್ ಪಾಲ್ ಮತ್ತು ಯುವ ಸ್ವಯಂಸೇವಕರಾದ ವೀರವರ್ಧನ್, ಬಾಬು, ದರ್ಶನ್ ಮತ್ತು ಶರಣಗೌಡ ವಿತರಣಾ ಕಾರ್ಯಕ್ರಮದ ಭಾಗವಾಗಿದ್ದರು.

ನಾಳೆ ಪರಿಸರ ದಿನಾಚರಣೆ
ವಿಶೇಷ ಲೇಖನ



ಹಂಪಿ ಟೈಮ್ಸ್
HAMPI TIMES

# ವನ್ಯಜೀವಿ, ಪರಿಸರ ಸಂರಕ್ಷಕ ಕರಡಿ(ಪಂಪಯ್ಯ) ಸ್ವಾಮಿ

## ಪಂಪಯ್ಯನವರ ತೋಟಕ್ಕೆ ಗಾಂಧಿ ಮೊಮ್ಮಗ ರಾಜ್‌ಮೋಹನ್ ಗಾಂಧಿ ಭೇಟಿ | ಬರಡುಭೂಮಿಯನ್ನ ಹಸಿರಾಗಿಸಿದ ಛಲಗಾರ

**"ಹಕ್ಕಿಗಳ ಸಂಗದಲ್ಲಿ ರೆಕ್ಕೆ ಮೂಡುವುದೆನೆಗೆ, ಹಾರುವುದು ವೃತ್ತಕ್ಷಿ ಲೋಕಗಳ ಕೊನೆಗೆ." – ರಾಷ್ಟ್ರಕವಿ ಕುವೆಂಪು.**

ಪಕ್ಷಿಗಳ ಫೋಟೊಗ್ರಾಫಿ, ಪಕ್ಷಿ ವೀಕ್ಷಣೆ, ವನ್ಯಜೀವಿ ಸಂರಕ್ಷಣೆ, ಹಾವುಗಳ ಸಂರಕ್ಷಣೆ, ಪರಿಸರ ಸಂರಕ್ಷಣೆ ,ಪರಿಸರ ಪ್ರವಾಸೋದ್ಯಮ, ಜೀವವೈವಿಧ್ಯತೆಯ ಸಂರಕ್ಷಣೆ ಜಾಗೃತಿ, ಕಾಡು ಬೆಳೆಸುವಿಕೆ – ಸಂರಕ್ಷಣೆ ಸಾವಯವ ಕೃಷಿ, ಸಮಾಜ ಸೇವೆ, ನಿಸರ್ಗದ ಹತ್ತು ಹಲವು ವಿಭಿನ್ನತೆಗಳ ಮೇಲೆ ಆಸಕ್ತಿ, ಕಾಳಜಿ ಮತ್ತು ಅಪಾರ ಜ್ಞಾನ ಹೊಂದಿರುವ ಪರಿಸರ ಪ್ರೇಮಿ ಪಂಪಯ್ಯ ಸ್ವಾಮಿ ಮಳಿಮಠ. ಸಮಾಜ ಸೇವೆ, ರಾಜಕೀಯ ಹೀಗೆ ಹಲವು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹೌದು, ಇವರು ಹಂಪಿಯ ಪರಿಸರದಲ್ಲಿ ಪಕ್ಷಿಗಳ ಹಾಗೂ ವನ್ಯಜೀವಿಗಳ ಬೇಟೆಯನ್ನು ತಡೆಯಲು, ಅವುಗಳ ಸಂರಕ್ಷಣೆಗಾಗಿ ನಿರಂತರ ಪರಿಶ್ರಮದಿಂದ ಸಾಕಷ್ಟು ಕೆಲಸಮಾಡಿರುವವರು. ಏಷ್ಯಾದ ಪ್ರಥಮ ಕರಡಿ ಧಾಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದರೋಜಿ ಕರಡಿ ಧಾಮದ ಸ್ಥಾಪನೆಯಿಂದ ಇತ್ತೀಚಿನ ವರ್ಷಗಳವರೆಗೆ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಕೈಜೋಡಿಸಿ ಹಗಲಿರುಳು ಅದರ ಬೆಳವಣಿಗೆಗೆ ಕಾರ್ಯನಿರ್ವಹಿಸಿದವರು. ಹೀಗಾಗಿ ದರೋಜಿ ಕರಡಿ ಧಾಮದ ಬೆಳವಣಿಗೆಯಲ್ಲಿ ಇವರ ಪಾತ್ರ ಬಹಳ ಪ್ರಮುಖವಾದದ್ದಾಗಿದೆ. ಹೀಗಾಗಿಯೇ ಸರ್ಕಾರ ಇವರನ್ನು ಬಳ್ಳಾರಿ ಜಿಲ್ಲೆಯ ವನ್ಯಜೀವಿ ಪರಿಪಾಲಕ ಎಂದು ನೇಮಕ ಮಾಡಿತ್ತು. ವಿಶೇಷವಾಗಿ ಕರಡಿಗಳ ಬಗ್ಗೆ ಅಪಾರವಾದ ತಿಳುವಳಿಕೆಯನ್ನು ಹೊಂದಿರುವ ಇವರು. ಕರಡಿಗಳ ಹಲವು ಭಂಗಿಗಳಲ್ಲಿರುವ ಅತ್ಯುತ್ತಮವಾದ ಅತಿ ಹೆಚ್ಚು ಫೋಟೋಗಳನ್ನು ಸೆರೆಹಿಡಿದ ಮೊದಲಿಗ ಎಂದು 'ದೇಶದ ತುಂಬಾ ಹೆಸರು ಮಾಡಿ South bear of Indian man' ಎಂದೆ ಕರೆಯಿಸಿಕೊಂಡಿರುವ ಹಾಗೂ ಕರಡಿಗಳ ಬಗ್ಗೆ ಇವರಿಗಿರುವ ಆಸಕ್ತಿ ಹುಚ್ಚು ಕರಡಿ ಪ್ರೀತಿ ಕಂಡಿರುವ ಸ್ಥಳೀಯ ಜನರು ಇವರನ್ನು "ಕರಡಿ ಸ್ವಾಮಿ "ಎಂದೆ ಕರೆಯುತ್ತಾರೆ. ಸ್ಥಳೀಯವಾಗಿ ಮತ್ತು ದೇಶದ ತುಂಬಾ ಕರಡಿ ಪ್ರೀತಿ ಯಿಂದ ಪ್ರಸಿದ್ಧಿ ಪಡೆದಿರುವ ಏಕೈಕ ವ್ಯಕ್ತಿ ಪಂಪಯ್ಯ ಸ್ವಾಮಿ ಮಳಿಮಠ. ಇಷ್ಟೇ ಅಲ್ಲ ವಿಶ್ವ ಪರಂಪರೆಯ ಹಂಪಿಗೆ ಪ್ರವಾಸಿಗರು ಹಂಪಿಯ ಸ್ಮಾರಕಗಳನ್ನು ನೋಡಲು ಮಾತ್ರ ಬರುತ್ತಿದ್ದರು ಆದರೆ ಪಂಪಯ್ಯ ಸ್ವಾಮಿಯವರ ಹಂಪಿ ಪರಿಸರದ ವೈಲ್ಡ್ ಲೈಫ್ ಫೋಟೋಗ್ರಾಫಿಯಿಂದಾಗಿ ಪರಿಸರ ಪ್ರವಾಸೋದ್ಯಮವನ್ನು ಸಹ ಇವರು ಹುಟ್ಟು ಹಾಕಿದ್ದಾರೆ. ಇವರ ಪರಿಸರ ಕಾಳಜಿ, ಪಕ್ಷಿಗಳ ಬಗ್ಗೆ ಇರುವ ತಜ್ಞತೆಗಾಗಿ ಹಂಪಿಯ ಸಲೀಂ ಆಲಿ ಎಂದೇ ಜನರು ಪಂಪಯ್ಯ ಸ್ವಾಮಿಯನ್ನು ಕರೆಯುತ್ತಾರೆ. ಇವರು ಕುರಿತ ಲೇಖನ ಪರಿಸರ ದಿನಾಚರಣೆಯ ಸಂದರ್ಭಕ್ಕಾಗಿ.

"ಅದೃಷ್ಟವಂತರು ಮಾತ್ರ ಪ್ರಕೃತಿಯ ಮಡಿಲಲ್ಲಿ ನಡೆದಾಡಲು ಸಾಧ್ಯ" ಎಂಬ ಮಾತಿನಂತೆ ಸದಾ ಪ್ರಕೃತಿಯನ್ನೇ ಆರಾಧಿಸುತ್ತಾ ಬದುಕಾಗಿಸಿಕೊಂಡಿರುವ ಪಂಪಯ್ಯ ಸ್ವಾಮಿ ಹಂಪಿ ಪರಿಸರದಲ್ಲಿ ಅಷ್ಟೇ ಅಲ್ಲ ಇಡೀ ದೇಶದ ಉದ್ದಗಲಕ್ಕೂ ವೈಲ್ಡ್ ಲೈಫ್ ಫೋಟೋಗ್ರಾಫಿಯಲ್ಲಿ ಕೇಳಿ ಬರುವ ಪ್ರಮುಖ ಹೆಸರುಗಳಲ್ಲಿ ಪಂಪಯ್ಯ ಸ್ವಾಮಿಯವರದ್ದು ಸಹ ಪ್ರಮುಖವಾದದ್ದು.

ಆಸಕ್ತಿ ಉತ್ಸಾಹ, ಕುತೂಹಲವುಳ್ಳ ಮನಸ್ಸು, ಸತತ ಪರಿಶ್ರಮಗಳಿಂದ ಏನನ್ನಾದರೂ ಸಾಧಿಸಬಹುದು ಎನ್ನುವುದನ್ನು ಪಂಪಯ್ಯ ಸ್ವಾಮಿ ಮಳಿಮಠ ಸಾಬೀತು ಮಾಡಿದ್ದಾರೆ. ಹೌದು, ಓದಿದ್ದು ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ, ಆದರೆ ಸಾಧನೆ ಮಾಡಿದ್ದು ಮಾತ್ರ ಪರಿಸರ, ಪಕ್ಷಿಗಳು ಹಾಗೂ ವನ್ಯಜೀವಿಗಳ ಲೋಕದಲ್ಲಿ. ಹಂಪಿಯ ಹೊಳೆ, ತುಂಗಭದ್ರ ಹಿನ್ನೀರಿನಿಂದ ದಾಂಡೇಲಿಯ ಕಾಳಿ ನದಿಯವರೆಗೆ. ದರೋಜಿ ಕರಡಿ ಧಾಮದಿಂದ ರಾಣೆಬೆನ್ನೂರಿನ ಕೃಷ್ಣಮೃಗ ಅಭಯಾರಣ್ಯ, ಬಂಡಿಪುರದ ಹುಲಿ ಸಂರಕ್ಷಣೆ ಅರಣ್ಯದವರೆಗೆ ಇವರ ಕಾರ್ಯಕ್ಷೇತ್ರ.

ದೇಶದ ಖ್ಯಾತ ಪರಿಸರ ತಜ್ಞರು ವನ್ಯಜೀವಿ ತಜ್ಞರು, ಪಕ್ಷಿಗಳ ಬಗ್ಗೆ ಆಸಕ್ತಿ ಇರುವವರು, ಹಂಪಿ ಪರಿಸರದ ಪಕ್ಷಿಗಳು, ದರೋಜಿ ಕರಡಿಗಳ ಫೋಟೋಗ್ರಾಫಿಗಾಗಿ, ವೀಕ್ಷಣೆಗಾಗಿ, ಕರಡಿಗಳ ಅಧ್ಯಯನಕ್ಕಾಗಿ ಪಂಪಯ್ಯಸ್ವಾಮಿಯವರ ಭೇಟಿಯಾಗಿ, ಚರ್ಚಿಸಲು ಹಾಗೂ ಅವರ ಮಾರ್ಗದರ್ಶನಕ್ಕಾಗಿ ಹುಡುಕಿಕೊಂಡು ಬರುತ್ತಿದ್ದಾರೆ. ಇವರು ಸರ್ಕಾರದ ಜಾಗದಲ್ಲಿ ಕಲ್ಲುಗಳಿಂದ ಕೂಡಿದ್ದ ಬರಡು ಭೂಮಿಯಲ್ಲಿ ಗಿಡಗಳನ್ನು ನೆಟ್ಟು, ತಮ್ಮ ಸ್ವಂತ ಪರಿಶ್ರಮದಿಂದ ಬೆಳೆಸಿರುವ ಅರಣ್ಯವನ್ನು ಅವರ ಸಾವಯವ ತೋಟವನ್ನು ಪಕ್ಷಿಗಳನ್ನು ನೋಡಲು ದೇಶದ ಸೆಲೆಬ್ರಿಟಿಗಳು ಸಹ ಹುಡುಕಿಕೊಂಡು ಬರುತ್ತಿದ್ದಾರೆ. ಅಂಥವರಲ್ಲಿ ಇತ್ತೀಚಿಗೆ ಬಂದವರು ಮಹಾತ್ಮ ಗಾಂಧೀಜಿಯವರ ಮೊಮ್ಮಗ ರಾಜ್‌ಮೋಹನ್ ಗಾಂಧಿ. ಹೌದು ಪಂಪಯ್ಯನವರು ಬೆಳೆಸಿರುವ ಅರಣ್ಯ, ವೈಲ್ಡ್ ಲೈಫ್ ಫೋಟೋಗ್ರಾಫಿ ಹಾಗೂ ಇವರ ಪರಿಸರ ಕಾರ್ಯವನ್ನು ಸಾಮಾಜಿಕ ಜಾಲತಾಣದಲ್ಲಿ ವೀಕ್ಷಿಸಿ ದೂರವಾಣಿ ಸಂಪರ್ಕದ ಮೂಲಕ ಸಂಪರ್ಕಿಸಿ ಹಂಪಿಯ ಪ್ರವಾಸಕ್ಕೆಂದು ಬಂದಾಗ, ರಾಜ್‌ಮೋಹನ್ ಗಾಂಧಿ ತಮ್ಮ ಪತ್ನಿ ಹಾಗೂ ಅಳಿಯನೊಂದಿಗೆ ಬಂದು ಹಲವು ಗಂಟೆಗಳ ಕಾಲ ಇದ್ದು, ಇವರ ಕಾರ್ಯಗಳ ಬಗ್ಗೆ ಮಾಹಿತಿ ಪಡೆದು ಇವರು ಬೆಳೆಸಿರುವ ಅರಣ್ಯವನ್ನು ಮನಸಾರೆ ಕಂಡು ಅಭಿನಂದಿಸಿ ಹಾಗೂ ಅವರ ಪತ್ನಿಯ ಜನ್ಮದಿನದೆಂದೆ ಬಂದಿದ್ದರ ನೆನಪು ಸದಾ ಹಸಿರಾಗಿರುವಂತೆ ತಾವೆ ಬಯಸಿ ಗಿಡಗಳನ್ನು ನೆಟ್ಟು ಹೋಗಿದ್ದು ಒಂದು ಚಾರಿತ್ರಿಕ ಘಟನೆ ಎಂದರೆ ತಪ್ಪಾಗಲಾರದು.




ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Hampi Times E-paper
SCAN AND READ

### ಪಕ್ಷಿ ವೀಕ್ಷಣೆಯಿಂದ ಬದಲಾದ ವ್ಯಕ್ತಿತ್ವ

ಪಂಪಯ್ಯ ಸ್ವಾಮಿ ವೈಲ್ಡ್ ಲೈಫ್ ಫೋಟೋಗ್ರಾಫಿಯಲ್ಲಿ ದೇಶದಾದ್ಯಂತ ಹೆಸರು ಮಾಡಿದ್ದಾರೆ. ಆದರೆ ಅವರು ಫೋಟೋಗ್ರಾಫಿ ಬಗ್ಗೆ ಯಾವುದೇ ತರಬೇತಿ ಪದವಿಯನ್ನು ಪಡೆಯದೆ ಕೇವಲ ಆಸಕ್ತಿ ಮತ್ತು ಕುತೂಹಲದಿಂದ ಫೋಟೋಗ್ರಫಿಯಲ್ಲಿ ತೊಡಗಿಸಿಕೊಂಡು ಮಾಡಿದ ಸಾಧನೆಗೆ ದೇಶವೇ ತಿರುಗಿನೋಡುವಂತಾಗಿದೆ.

ಪಂಪಯ್ಯ ಸ್ವಾಮಿಯವರು ಡಿಪ್ಲೋಮಾ ಮುಗಿಸಿ ಬೆಂಗಳೂರು ಇತರೆ ಸ್ಥಳಗಳಲ್ಲಿ ಉದ್ಯೋಗಿಯಾಗಿ ಸೇರಿಕೊಂಡಿದ್ದರು. ಆದರೆ ಅವುಗಳಲ್ಲಿ ಆಸಕ್ತಿ ಇಲ್ಲದಿದ್ದರಿಂದ ಊರಿಗೆ ಬಂದು ಊರಿನಲ್ಲಿ ಸ್ವಂತ



ಉದ್ಯೋಗವನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಇವರು ಸಮಾಜ ಸೇವೆಯನ್ನು ಸಹ ಪ್ರಾರಂಭಿಸಿದರು. ಆರೋಗ್ಯ ಶಿಬಿರ, ರಕ್ತದಾನ ಶಿಬಿರ ಕ್ರೀಡಾಕೂಟ, ವಿದ್ಯಾರ್ಥಿಗಳ, ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದನೆ ಹೋರಾಟ ಹಾಗೂ ಪೊಲೀಸ್ ಇಲಾಖೆಯೊಂದಿಗೆ ಜೊತೆಯಾಗಿ ಅನಾಥ ಶವಗಳಿಗೆ ಅಂತ್ಯ ಸಂಸ್ಕಾರ ಮೊದಲಾದ ಸಮಾಜಮುಖಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಈ ಸಂದರ್ಭದಲ್ಲಿ ಇವರು ಒಂದು ರೀತಿ ಕ್ರಾಂತಿಕಾರಿ ವ್ಯಕ್ತಿಯಾಗಿ ಹೋರಾಡುತ್ತಿದ್ದರು. ಊರಿನಲ್ಲಿ ಯುವಕರು ವಿದ್ಯಾರಣ್ಯ ಯುವಕರ ಸಂಘ ಸ್ಥಾಪಿಸಿಕೊಂಡು ಇವರ ನಾಯಕತ್ವದಲ್ಲಿ ಹೋರಾಟ ನಡೆಸುತ್ತಿದ್ದರು. ಈ ಸಮಯದಲ್ಲಿ ತಮ್ಮ ವೈಯಕ್ತಿಕ ಬದುಕನ್ನು ಮರೆತು ಹೋರಾಟ ಮಾಡುತ್ತಿದ್ದರು ಇದರಿಂದ ಮನೆಯಲ್ಲಿ ತಂದೆ ತಾಯಿಯರು ಚಿಂತೆಗೆ ಈಡಾದರು ಹಾಗೂ ಪಂಪಯ್ಯನವರು ಅನಾರೋಗ್ಯಕ್ಕೂ ಈಡಾಗಿ ಮನೆಯವರಿಗೆ ದೊಡ್ಡ ಸಮಸ್ಯೆಯಾಗಿತ್ತು. ಬದಲಾಯಿಸಲು ಯಾರಿಂದಲೂ ಸಾಧ್ಯವಾಗದ ಹಾಗೇ ಆಗಿತ್ತು. ಆದರೆ ಸಾಧ್ಯವಾಗಿದ್ದು ಎರಡು ಗುಬ್ಬಚ್ಚಿಗಳಿಂದ ಎಂದರೆ ಆಶ್ಚರ್ಯವಾಗಬಹುದು. ಆರೋಗ್ಯ ಹಾಗೂ ಮನಸ್ಸಿನ ವಿಚಲಿತೆಯಿಂದ ಆತಂಕಕ್ಕೆ ಒಳಗಾಗಿ ವಿಚಲಿತರಾಗಿದ್ದ ಇವರು ಒಂದು ದಿನ ಏಕಾಂತವಾಗಿ ಬಯಲಿನಲ್ಲಿ ಬಂಡೆಯಮೇಲೆಕುಳಿತುಆಲೋಚಿಸುತ್ತಿರುವಾಗ ಎದುರಿಗಿದ್ದ ತಾಯಿ ಪಕ್ಷಿ ತನ್ನ ಮರಿ ಪಕ್ಷಿಗೆ ಆಹಾರವನ್ನು ಹುಡುಕಿಕೊಂಡು ತಂದು ಕೊಡುವ ಕಷ್ಟವನ್ನು ಅರಿತರು. ತಮ್ಮ ತಂದೆ ತಾಯಿ ತನಗಾಗಿ ಪಡುತ್ತಿರುವ ಕಷ್ಟ ಅರಿವಾಯಿತು. ಪಕ್ಷಿಗಳ ಪ್ರೀತಿ ಬದುಕಿಗೆ ಆಕರ್ಷಿತರಾಗಿ ಮತ್ತೆ ಮತ್ತೆ ಅದೇ ಸ್ಥಳದಲ್ಲಿ ಕುಳಿತು ಪಕ್ಷಿಗಳನ್ನು ವೀಕ್ಷಿಸುತ್ತಾ ಹೋದಾಗ ಇವರು ಮನಸ್ಸು ಸಹ ಬದಲಾಯಿತ್ತ ಹೋಯಿತು. ಹೋರಾಟಗಳನ್ನು ಕೈ ಬಿಟ್ಟು ತಮ್ಮ ಸ್ಟೇಷನರಿ ವ್ಯಾಪಾರವನ್ನು ಕಮಲಾಪುರ ಮತ್ತು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರಾರಂಭಿಸಿದರು. ಆ ಹೊತ್ತಿಗಾಗಲೇ ಇವರು ಕರಡಿ ಧಾಮದ ಆಕರ್ಷಣೆಗೆ ಒಳಗಾಗಿ ಅಲ್ಲಿಗೆ ಬರುತ್ತಿದ್ದ ಖ್ಯಾತ ಫೋಟೋಗ್ರಾಫರ್‌ಗಳ ಆಕರ್ಷಣೆಗೆ ಒಳಗಾಗಿ ಕ್ಯಾಮಾರವನ್ನು ಹಿಡಿಯದ ಕೈ ಇಂದು ಕ್ಯಾಮಾರವನ್ನೇ ಬಿಟ್ಟಿರದಂತಾಗಿದ್ದಾರೆ.



### ಕರಡಿ ಧಾಮ ಮತ್ತು ಪಂಪಯ್ಯ

ಹಂಪಿಯ ಪ್ರದೇಶವು ಹಿಂದಿನಿಂದಲೂ ಕರಡಿಗಳ ಆವಾಸಸ್ಥಾನವಾಗಿದೆ. ಹೊಸಪೇಟೆ ಕಂಪ್ಲಿ ಸೊಂಡೂರು ಪ್ರದೇಶದಲ್ಲಿ ಕರಡಿಗಳು ಜನರೊಂದಿಗೆ ಮುಖಾಮುಖಿಯಾಗುತ್ತಾ, ಒಮ್ಮೆ ಕರಡಿ ದಾಳಿ ಯಾದಾಗ ಸಾವಿಗೀಡಾದ ಸಂದರ್ಭದಲ್ಲಿ ಮಂತ್ರಿಗಳು ಖ್ಯಾತ ವನ್ಯಜೀವಿ ಫೋಟೋಗ್ರಾಫರ್ ಆಗಿದ್ದ ಎಂ.ವೈ ಘೋರ್ಪಡೆಯವರ ಕನಸಿನಂತೆ ದರೋಜಿಯ ಬಿಳಿಕಲ್ಲು ಅರಣ್ಯ ಪ್ರದೇಶದಲ್ಲಿ ಕರಡಿ ಧಾಮ



ಸ್ಥಾಪಿತವಾಯಿತು. ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ 1994ರಲ್ಲಿ ಸ್ಥಾಪಿತವಾದ ಈ ಕರಡಿಧಾಮವು ಏಷ್ಯಾ ಖಂಡದಲ್ಲೇ ಪ್ರಥಮ ಕರಡಿ ಧಾಮ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಕರಡಿಧಾಮದ ಪ್ರಾರಂಭದಲ್ಲಿ ಅರಣ್ಯಅಧಿಕಾರಿಗಳೊಂದಿಗೆ ಸ್ಥಳೀಯರ ಸಹಕಾರ ಬೆಂಬಲ ಅವಶ್ಯವಿತ್ತು. ಪಂಪಯ್ಯ ಸ್ವಾಮಿಯವರ ಎಂಟ್ರಿ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ನೂರು ಆನೆಯ ಬಲ ಸಿಕ್ಕಾಂತಾಯಿತು. ಹಗಲು ರಾತ್ರಿ ಅಧಿಕಾರಿಗಳೊಂದಿಗೆ ಮನೆ, ಹೆಂಡತಿ, ಮಕ್ಕಳನ್ನ ಅಂಗಡಿ ವ್ಯವಹಾರಗಳನ್ನು ಮರೆತು ಕಾರ್ಯ ಮಾಡಿದ್ದು ಈಗ ಚರಿತ್ರೆ. ಆದರೆ ಕರಡಿ ಧಾಮ ಎನ್ನುವ ಪ್ರಯೋಗ ಶಾಲೆಯಲ್ಲಿ ನೋಡಿದ ಕರಡಿಗಳು, ತೆಗೆದ ಫೋಟೋಗಳು, ಪಡೆದು ಜ್ಞಾನ, ಅನುಭವ, ಸಿಕ್ಕ ಅವಕಾಶಗಳು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದ ವನ್ಯಜೀವಿ ಫೋಟೋಗ್ರಾಫರ್ ಗಳಾದ ಎಂ.ವೈ .ಘೋರ್ಪಡೆ, ಪೆರಿಮಳ್, ಮೈಸೂರಿನ ತಿಪ್ಪೇಸ್ವಾಮಿ, ವಿಜಯ ಮೋಹನ್ ರಾಜ್ ,ಅನಂತ ಜಾಂಜಲಿ ಮೊದಲಾದ ಪ್ರಖ್ಯಾತ ಫೋಟೋಗ್ರಾಫರ್ ಪಕ್ಷಿ ತಜ್ಞರು ಒಡನಾಟದಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡರು. ಹೀಗಾಗಿ ಅವರೊಂದಿಗೆ ದಿನಗಟ್ಟಲೆ ಕಳೆಯುತ್ತಾ ಅವರಿಗೆ ಊಟ ತಿಂಡಿ, ವಸತಿ ವ್ಯವಸ್ಥೆಯನ್ನು ಮಾಡುತ್ತಾ, ಅವರೊಂದಿಗೆ ಪ್ರಾಣಿ ಪಕ್ಷಿ ವನ್ಯಜೀವಿಗಳನ್ನು ವೀಕ್ಷಿಸುವ, ಛಾಯಾಚಿತ್ರಗಳನ್ನು ತೆಗೆಯುವ ಆಸಕ್ತಿಯನ್ನು ಬೆಳೆಸಿಕೊಂಡರು. ಇದು ಇವರ ಬದುಕು ಹಾಗೂ ವ್ಯಕ್ತಿತ್ವವನ್ನೇ ಬದಲಾಯಿಸಿತು.ಈ ಹೊತ್ತಿನ ಸಾಧನೆಗೆ ಕರಡಿ ಧಾಮ ಹಾಗೂ ಈ ದಿಗ್ಗಜರೇ ಸ್ಫೂರ್ತಿ.

### ಹಾರ್ನ್ ಬಿಲ್ ಪತ್ರಿಕೆಯಲ್ಲಿ ಸ್ವಾಮಿ ಕರಡಿ ಚಿತ್ರ

ವೈಲ್ಡ್ ಲೈಫ್ ಫೋಟೋಗ್ರಾಫಿಯಲ್ಲಿ ಸಾಧನೆ ಮಾಡಿದ ಸಾಧಕರಿಗೆ ಬಹುದೊಡ್ಡ ಆಸೆ ಮುಂಬೈಯಿಂದ ಪ್ರಕಟವಾಗುತ್ತಿರುವ ಹಾರನ್ ಬಿಲ್ ಪತ್ರಿಕೆಯಲ್ಲಿ ತಾವು ತೆಗೆದ ಫೋಟೋಗಳು ಪತ್ರಿಕೆಯ ಯಾವುದಾದರೂ ಪುಟದಲ್ಲಿ ಪ್ರಕಟವಾಗಬೇಕೆಂಬುದು. ಹೀಗೆ ಪಂಪಯ್ಯ ಸ್ವಾಮಿಯವರದು ಸಹಜವಾದಂತಹ ಆಸೆ ಮತ್ತು ಕನಸು. ಆದರೆ ಅವರು ಕಂಡ ಕನಸಿಗಿಂತ ಇವರ ಫೋಟೋಗಳು ಹಾರನ್ ಬಿಲ್ ಪತ್ರಿಕೆಯ ಮುಖಪುಟದಲ್ಲೇ ಪ್ರಕಟವಾಗಿದ್ದು ಇವರ ವೈಲ್ಡ್ ಲೈಫ್ ಫೋಟೋಗ್ರಾಫಿಯ ಅತ್ಯಂತ ಮಹತ್ವದ ಹಾಗೂ ಜೀವನದ ಸಂತಸ ಸಂತಸದ ಕ್ಷಣ .


### ಹಂಪಿಯ ಸಲಿಂ ಆಲಿ

ಹಂಪಿಯ ಪ್ರದೇಶದಲ್ಲಿ ಸುಮಾರು 250ಕ್ಕೂ ಹೆಚ್ಚು ಪ್ರಭೇದದ ಪಕ್ಷಿಗಳಿವೆ, ಇವುಗಳಲ್ಲಿ ಹೆಚ್ಚಾಗಿ ಸ್ಥಳೀಯ ಪಕ್ಷಿಗಳು ಮತ್ತು ವಲಸೆ ಪಕ್ಷಿಗಳು ಇವೆ. ಈ ಎಲ್ಲ ಪಕ್ಷಿ ಪ್ರಭೇದಗಳ ಬಗ್ಗೆ ಚಿಟ್ಟೆಗಳ ಬಗ್ಗೆ ಹಾವು ಕೀಟ ವನ್ಯಜೀವಿಗಳ ಬಗ್ಗೆ ಮಾಹಿತಿ ಅವುಗಳ ಜೀವನಶೈಲಿ ಸಂತಾನೋತ್ಪತ್ತಿ ಹೀಗೆ ಎಲ್ಲಾದರ ನಿಖರ ಮಾಹಿತಿಯನ್ನು ಪಂಪಯ್ಯ ಸ್ವಾಮಿಯವರು ಬಲ್ಲವರು. ಬಹುತೇಕ ಎಲ್ಲ ಪಕ್ಷಿಗಳ ಫೋಟೋಗ್ರಫಿಗಳನ್ನು ಸಹ ಮಾಡಿದವರು. ಹಂಪಿಯ ಪ್ರದೇಶದಲ್ಲಿರುವ ಕೆಲವು ಪಕ್ಷಿಗಳು ಇಲ್ಲಿ ಹೊರತುಪಡಿಸಿದರೆ ಮತ್ತೆ ಯಾವುದೇ ಪ್ರದೇಶದಲ್ಲಿ ಕಾಣಸಿಗುವುದಿಲ್ಲ. ಈ ಪಕ್ಷಿಗಳನ್ನು ಗುರುತಿಸಿ ಫೋಟೋಗಳನ್ನು ಪಂಪಯ್ಯ ಸ್ವಾಮಿಯವರು ತೆಗೆದಿದ್ದು ಇವು ದೇಶದ ತುಂಬಾ ಹೆಸರು ತಂದುಕೊಟ್ಟಿವೆ. ಅವುಗಳಲ್ಲಿ ಪ್ರಮುಖವಾಗಿ ಬಣ್ಣದ ಚಿಟ್ಟು ಕೋಳಿ (painted spurfowl) ಹಾಗೂ ಬಣ್ಣದ ಗೌಜುಗ (painted sandgrous). ಇಂಥ ಅಪರೂಪದ ಪಕ್ಷಿಗಳ ವೀಕ್ಷಣೆಗಾಗಿ ದೇಶದ ವಿವಿಧ ಪ್ರದೇಶಗಳಿಂದ ಆಸಕ್ತರು ಇವರನ್ನು ಹುಡುಕಿಕೊಂಡು ಬಂದು ಇವರ ಮಾರ್ಗದರ್ಶನವನ್ನು ಪಡೆಯುತ್ತಿದ್ದಾರೆ. ಹೀಗಾಗಿ ಇವರನ್ನು ಹಂಪಿಯ ಪಕ್ಷಿ. ತಜ್ಞ ಸಲಿಂ ಆಲಿ ಎಂದೆ ಕರೆಯುತ್ತಾರೆ.



### ಹಾವುಗಳ ಸಂರಕ್ಷಕ

ಈ ಭಾಗದ ಪಕ್ಷಿಗಳ ಬಗ್ಗೆ ಹಾಗೂ ಕರಡಿಗಳ ಬಗ್ಗೆ ವನ್ಯಜೀವಿಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಪಂಪಯ್ಯ ಸ್ವಾಮಿಯವರು ಹಾವುಗಳ ಬಗ್ಗೆಯೂ ಸಹ ಬಲ್ಲವರು ಈ ಪ್ರದೇಶದಲ್ಲಿರುವ ಹತ್ತಾರು ಜಾತಿಯ ಹಾವುಗಳನ್ನು ಸಂರಕ್ಷಿಸುವ ಬಗ್ಗೆ ಅತ್ಯಂತ ಕಾಳಜಿಯನ್ನು ವಹಿಸಿರುವವರು ಹಾವುಗಳನ್ನು ಹೊಡೆದು ಸಾಯಿಸುವ ಬಗ್ಗೆ ಹಾಗೂ ಜನರಲ್ಲಿ ಹಾವುಗಳಲ್ಲಿರುವ ಮೂಢನಂಬಿಕೆಯನ್ನು ಹೋಗಲಾಡಿಸಲು ಹಾಗೂ ಇವುಗಳನ್ನು ಸಂರಕ್ಷಿಸಲು ಶಾಲೆ ಕಾಲೇಜುಗಳಲ್ಲಿ ಜಾಗೃತಿ ಅಭಿಯಾನಗಳನ್ನು ನಡೆಸಿ ಪ್ರೊಜೆಕ್ಟರ್ ಮೂಲಕ ವಿದ್ಯಾರ್ಥಿಗಳಲ್ಲಿ ಹಾವುಗಳ ಬಗ್ಗೆ ಇರುವ ಭಯ ಮತ್ತು ಮೂಢನಂಬಿಕೆಯನ್ನು ದೂರ ಮಾಡಿ ಅವುಗಳನ್ನ ರಕ್ಷಿಸುವ ಬಗ್ಗೆ ಮಾರ್ಗದರ್ಶನವನ್ನು ಮಾಡುತ್ತಾ ಬಂದಿದ್ದಾರೆ. ಸ್ವತಃ ಇವರು ಮನೆ ಶಾಲೆ, ಕಾಲೇಜು ಕಚೇರಿಗಳ ಒಳಗಡೆ ಬಂದ 2,000ಕ್ಕೂ ಹೆಚ್ಚು ಹಾವುಗಳನ್ನು ಸಂರಕ್ಷಣೆ ಮಾಡಿ ಸುರಕ್ಷಿತವಾಗಿ ಕಾಡಿಗೆ ಬಿಟ್ಟಿದ್ದಾರೆ.




### ಪಂಪಯ್ಯಸ್ವಾಮಿಗೊಲಿದ ಗೌರವ ಪ್ರಶಸ್ತಿಗಳು

**ವೈಲ್ಡ್ ಲೈಫ್ ಫೋಟೋಗ್ರಾಫಿಗಾಗಿ, ಪರಿಸರ ಸಂರಕ್ಷಣೆ, ಸಾವಯವ ಕೃಷಿಗಾಗಿ, ಸಮಾಜ ಸೇವೆ ಮೊದಲಾದ ಕಾರ್ಯಗಳಿಗಾಗಿ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅವುಗಳಲ್ಲಿ ಪ್ರಮುಖವಾದದ್ದು ಎಂದರೆ**

**ಪ್ರತಿಷ್ಠಿತ ಕಿರ್ಲೋಸ್ಕರ್ ವಸಂತ ಮಿತ್ರ ಪ್ರಶಸ್ತಿ**

**ಪತಂಜಲಿ ಸೇವಾ ಸಮಿತಿ ಪ್ರಶಸ್ತಿ**

**ವೈಪಿಎಸ್ ಬೆಂಗಳೂರು ವನ್ಯಜೀವಿ ಸೇವಾ ಪ್ರಶಸ್ತಿ ಸರ್ಟಿಫಿಕೇಟ್ ಆಫ್ ಮೆರಿಟ್ ಬೈ ಕೆ ಎಸ್ ಟಿ ಡಿ ಸಿ (ಕರ್ನಾಟಕ ವೈಲ್ಡ್ ಲೈಫ್ ಫೋಟೋಗ್ರಾಫಿ)**

**Pupli tree ಬಳ್ಳಾರಿ ಪರಿಸರ ಪ್ರಶಸ್ತಿ**

**ಅನುಭಾಭಿ ಆರ್ಗೈನೈಷನ್ ಕಲ್ಕತ್ತಾ ಇವರ ಗ್ರೀನ್ ವಾರಿಯರ್ ಪ್ರಶಸ್ತಿ**

**ಬಳ್ಳಾರಿ ಕೃಷಿ ಇಲಾಖೆಯ ಶ್ರೇಷ್ಠ ಕೃಷಿಕ ಪ್ರಶಸ್ತಿ**

**ಬಳ್ಳಾರಿ ಜಿಲ್ಲೆಯ ಗೌರವ ವನ್ಯಜೀವಿ ಪರಿಪಾಲಕ ಹುದ್ದೆ ಯನೇಮಕ**

**ಹಂಪಿ ಉತ್ಸವದ ಛಾಯಾಚಿತ್ರ ಸ್ಪರ್ಧೆಯಲ್ಲಿ ಹಲವಾರು ಬಾರಿ ವನ್ಯಜೀವಿ ವಿಭಾಗದಲ್ಲಿ ಪ್ರಥಮ ಬಹುಮಾನ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳ ಗೌರವಕ್ಕೆ ಪಾತ್ರರಾಗಿರುವ ಇವರು ವಿಜಯನಗರ ಜಿಲ್ಲೆಯ ಹೆಮ್ಮೆ.**

### ಅರಣ್ಯ ಬೆಳೆಸುವಿಕೆ

ಪರಿಸರದ ಬಗ್ಗೆ ಅಪಾರ ಜ್ಞಾನ ಕಾಳಜಿ ಹೊಂದಿರುವ ಇವರು ತಮ್ಮದೇ ಆದ ಕನಸನ್ನು ಹೊತ್ತು ಒಂದು ಕಿರು ಅರಣ್ಯ ಬೆಳೆಸುವ ಕೆಲಸಕ್ಕೆ ಕೈಹಾಕಿ ಯಶಸ್ವಿಯಾಗಿದ್ದಾರೆ. ಹೊಸಪೇಟೆ ತಾಲೂಕಿನ ಕಮಲಾಪುರದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ನಲ್ಲಾಪುರಕ್ಕೆ ಹೋಗುವ ಎಚ್‌ಎಲ್ ಸಿ ಕಾಲುವೆಗೆ ಹೊಂದಿಕೊಂಡಿರುವ ಬರಡು ಭೂಮಿಯಲ್ಲಿ ಸ್ಥಳೀಯವಾಗಿ ಸಿಗುವ ದೇಸಿ ಗಿಡಗಳನ್ನು ನೆಟ್ಟು ತಮ್ಮ ಸ್ವಂತ ಹಣ ದಿಂದ ಗೊಬ್ಬರ, ನೀರು ಹಾಕಿ ಬೆಳೆಸಿ ಇವತ್ತು ಮೂರುವರೆ ಎಕ್ಕರೆಷ್ಟು ಸರ್ಕಾರದ ಜಾಗದಲ್ಲಿ ಕಿರು ಅರಣ್ಯವನ್ನು ಬೆಳೆಸಿದ ಹೆಗ್ಗಳಿಕೆ ಕೀರ್ತಿ ಪಂಪಯ್ಯ ಸ್ವಾಮಿಯವರದ್ದು. ಅರೇಳು ವರ್ಷಗಳ ಹಿಂದೆ ನೆಟ್ಟ ಈ ಗಿಡಗಳು ಇಂದು ಬೃಹತ್ ಆಗಿ ಬೆಳೆದು ಹಸಿರನ್ನು ಹೊದ್ದು ಕಂಗೊಳಿಸುತ್ತಿವೆ. 800ಕ್ಕೂ ಹೆಚ್ಚು ಗಿಡಗಳನ್ನು ಬೆಳಸಿದ್ದಾರೆ.ಇವುಗಳಲ್ಲಿ 60 ಪ್ರಭೇಧದ ಗಿಡಗಳಿವೆ ಈ ಗಿಡಗಳಲ್ಲಿ 60 ಹೆಚ್ಚು ಪ್ರಬೇಧಧ ಪಕ್ಷಿಗಳು ಆಹಾರ ಹುಡುಕಿಕೊಂಡು ಬಂದು ಇಲ್ಲೇ ತಮ್ಮ ಗೂಡು ಕಟ್ಟಿ, ಸಂತತಿಯನ್ನು ಬೆಳೆಸುತ್ತೇವೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅರಣ್ಯ ಇಲಾಖೆ ಗಿಡ ಮರಗಳನ್ನು ಬೆಳೆಸಿ ರಕ್ಷಿಸಲು ಆಗದ ಹೊತ್ತಿನಲ್ಲಿ ಪಂಪಯ್ಯ ಸ್ವಾಮಿಯವರು ಸ್ವಂತ ಖರ್ಚಿನಿಂದ ಸಾವಿರಾರು ಗಿಡಗಳನ್ನು ಬೆಳೆಸಿ ಹಸಿರು ವನವನ್ನಾಗಿ ಮಾಡಿದ್ದಾರೆ. ಇದು ಸಮಾಜಕ್ಕೆ ಅರಣ್ಯ ಇಲಾಖೆಗೆ ಒಂದು ಮಾದರಿಯಾಗಿದೆ. ಅರಣ್ಯ ಮತ್ತು ವನ ಸಂಪತ್ತನ್ನು ಬೆಳೆಸಿ ಸಂರಕ್ಷಿಸಬೇಕು ಎನ್ನುವ ಇವರ ಸಂಕಲ್ಪವನ್ನು ಹಾಗೂ ಕೃಷಿ ಪ್ರವಾಸೋದ್ಯಮವನ್ನು ಬೆಳಸಿ ಪ್ರೋತ್ಸಾಹಿಸಬೇಕೆಂಬ ಆಸೆಯನ್ನು ಇವ್ರು ಈಡೇರಿಸಿಕೊಂಡಿದ್ದಾರೆ.

### ಸಾವಯವ ಕೃಷಿ

ಸಾವಯವ ಕೃಷಿ, ಅರಣ್ಯ ಕೃಷಿ ಹಾಗೂ ಕೃಷಿ ಪ್ರವಾಸೋದ್ಯಮ ಬಗ್ಗೆ ತಜ್ಞರುಗಳು ಮಾತನಾಡುತ್ತಿರುವಾಗ, ಇವರು ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ ಯಶಸ್ವೀಯಾಗಿದ್ದಾರೆ. ಇವರು ರೈತರಲ್ಲಿ ಈ ಬಗ್ಗೆ ಜಾಗೃತಿ ಮೂಡುವ ಕೆಲಸವನ್ನು ಮಾಡುತ್ತಿದ್ದಾರೆ. ಸಾವಯವ ಕೃಷಿ ಮಾಡುತ್ತಿರುವ ಹೊಲಗಳಿಗೆ ಭೇಟಿ ಕೊಟ್ಟ ಅವರಿಂದ ಮಾಹಿತಿ ಪಡೆದು ತಮ್ಮ ಬಳಿ ಇರುವ ಮಾಹಿತಿಯನ್ನು ಪ್ರಾತ್ಯೇಕ್ಷೀಕಗಳ ಮೂಲಕ ಉಪನ್ಯಾಸಗಳ ಮೂಲಕ ಪ್ರಚಾರ ಮಾಡುತ್ತಿದ್ದಾರೆ. ಸ್ವತಃ ತಮ್ಮ ಒಂದು ಎಕರೆ ಭೂಮಿಯಲ್ಲಿ ಸಾವಯುವ ಕೃಷಿ ಮತ್ತು ಅರಣ್ಯ ಕೃಷಿಯನ್ನು ಅಳವಡಿಸಿಕೊಂಡು ಹತ್ತು ಹಲವು ಬಗೆಗಳಲ್ಲಿ ಕೃಷಿಯನ್ನು ಮಾಡುತ್ತಿದ್ದಾರೆ ಹಾಗಾಗಿ ಇವರ ಒಂದು ಭೂಮಿ ಪ್ರಾಯೋಗಿಕ ಸ್ಥಳವಾಗಿ ಮಾರ್ಪಟ್ಟಿದೆ. ಇವರ ಈ ಆಸಕ್ತಿ ಮತ್ತು ಕಾರ್ಯಗಳನ್ನು ನೋಡಲು ಹಲವು ಕಡೆಯಿಂದ, ಕೃಷಿ ತಜ್ಞರು ಜಲತಜ್ಞರು ಕೃಷಿ ತಜ್ಞರು ಪಕ್ಷಿ ತಜ್ಞರು ಇವರ ಈ ತೋಟಕ್ಕೆ ಆಗಮಿಸಿ ಇವರ ಕಾರ್ಯಗಳನ್ನು ಹಾಗೂ ಆಹ್ಲಾದಕರ ವಾತಾವರಣ ಅನುಭವಿಸಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ ಇವರುಗಳಲ್ಲಿ ಗಾಂಧಿಜಿಯವರ ಮೊಮ್ಮಗ ರಾಜ್‌ಮೋಹನ್ ಗಾಂಧಿ, ಜಲ ತಜ್ಞೆ ಶ್ರೀ ಪಡ್ರೆ, ಶಿವಾನಂದ ಕಳವಿ, ಪೂರ್ಣಪ್ರಜ್ಞ ಬೇಳೂರು ಮೊದಲಾದವರು ಹಾಗೂ ಆಸಕ್ತರು ಇವರ ತೋಟಕ್ಕೆ ಭೇಟಿ ನೀಡುತ್ತಿದ್ದಾರೆ.

### ಪಟ್ಟಣ ಪಂಚಾಯಿತಿ ಅಧ್ಯಕ್ಷ.

ಪಕ್ಷಿ ವೀಕ್ಷಣೆ ಕರಡಿಧಾಮ ಸಮಾಜ ಸೇವೆ ಕಮಲಾಪುರದ ಟಿಸಿ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾಗಿ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ್ದಾರೆ. ತಮ್ಮ ಬಿಡುವಿಲ್ಲದ ಪರಿಸರದ ಕೆಲಸ ಕಾರ್ಯಗಳ ಮಧ್ಯೆ ರಾಜಕೀಯ ಪ್ರವೇಶಿಸಿ ಕಮಲಾಪುರದ ಪಟ್ಟಣ ಪಂಚಾಯಿತಿಯ ಸದಸ್ಯರಾಗಿ ಅಧ್ಯಕ್ಷರಾಗಿ ಪಟ್ಟಣದಲ್ಲಿ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಿ ಹೆಸರು ಮಾಡಿದ್ದವರು ಆದರೆ ರಾಜಕೀಯ ಕ್ಷೇತ್ರದಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ ಉಳಿಯದೆ ಮತ್ತೆ ತಮ್ಮ ಮೂಲ ಪಕ್ಷಿಗಳ ಒಡನಾಟದೊಂದಿಗೆ ಇರುವ, ಪರಿಸರದೊಂದಿಗೆ ಬದುಕುವ ಕಾರಣಕ್ಕಾಗಿ ರಾಜಕೀಯವನ್ನು ಬಿಟ್ಟು ಈಗ ಮತ್ತೆ ಕಾಡನ್ನು ಸೇರಿದ್ದಾರೆ.

**ಕಾಡು ಬೆಳೆಸಿ, ನಾಡು ಉಳಿಸಿ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA